ಕೊಡಬೇಕಾದಂತಹ ಅವಶ್ಯಕತೆ ಇದೆ. ದುಡ್ಡನ್ನು ಬಿಡುಗಡೆ ಮಾಡುತ್ತೇವೆ. ನಾನು ಹಣಕಾಸಿನ ಮಂತ್ರಿಗಳನ್ನು ಹೋಗಿ ನೋಡಿದಾಗ ಕೂಡಲೇ ಇನ್ನು ಏಳುವರೆ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಾರೆ. ಏಳೂವರೆ ಕೋಟಿ ರೂಪಾಯಿಗಳನ್ನು ಮೊದಲೇ ಬಿಡುಗಡೆ ಮಾಡಿದ್ದಾರೆ, ಇನ್ನು ಏಳುವರೆ ಕೋಟಿ ರೂಪಾಯಿಗಳನ್ನು ಇನ್ನು ಒಂದೆರಡು ದಿವಸಗಳಲ್ಲಿ ಬಿಡುಗಡೆಯಾಗುತ್ತದೆ. ಇನ್ನು ಒಟ್ಟು ಈ ಮಲೆನಾಡು ಅಭಿವೃದ್ಧಿಗಾಗಿ ಹತ್ತೊಂಭತ್ತುವರೆ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿದೆ. ಮಾನ್ಯ ಸದಸ್ಯರು ತಾವುಗಳು ಏನು ಹೇಳಿದ್ದೀರಿ ಉಳಿದ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹಣಕಾಸಿನ ಸಚಿವರು ಒಪ್ಪಿಕೊಂಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, 25 ಕೋಟಿ ರೂಪಾಯಿಗಳು ಬಿಡುಗಡೆಯಾಗುವುದು ಹಾಗೆಯೇ ಉಳಿದಿದೆ ಇದರ ಬಗ್ಗೆ ಸಿದ್ದರಾಮಯ್ಯನವರು out of Rs. 60 crores, only Rs. 25 crores have been released and Rs. 35 crores are yet to be released. Hardly a month is left. ಆದ್ದರಿಂದ ಅದರ ಬಗ್ಗೆ ಹೇಳಿಬಿಡಿ.

SRI H.D. DEVEGOWDA : That is also going to be released.

೪) ಚಾಮರಾಜನಗರದಲ್ಲಿ ಶಾಂತಿಸಮಿತಿಗೆ ಬಂದವರ ಬಂಧನ

+ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ನೆನ್ನೆ ದಿವಸ ಅಧ್ಯಕ್ಷರ ಮುಖಾಂತರ ಚಾಮರಾಜನಗರದ ಬಗ್ಗೆ ಪ್ರಸ್ತಾಪ ಮಾಡಿದಾಗ ಸಾಯಂಕಾಲ ಬಂದು ಉತ್ತರವನ್ನು ಕೊಡುತ್ತೇನೆಂದು ಸಚಿವರು ಉತ್ತರ ಹೇಳಿದ್ದರು. ಈಗ ಇದರ ಬಗ್ಗೆ ಉತ್ತರವನ್ನು ಕೊಡಬೇಕಾಗುತ್ತದೆ. ಬಂಧಿತರು ಮೈಸೂರು ನಗರದ ಜೈಲಿನಲ್ಲಿ ಕೊಳೆಯುತ್ತಿದ್ದಾರೆ, ಅಮರಣಾಂತರ ಉಪವಾಸವನ್ನು ಮಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ಅಲ್ಲಿರತಕ್ಕಂತಹ 7 ಜನರನ್ನು ಬಂಧನ ಮಾಡಿ ಮೈಸೂರು ನಗರದಲ್ಲಿರತಕ್ಕಂತಹ ಜೈಲಿನಲ್ಲಿ ... ಸನ್ಮಾನ್ಯ ಗೃಹ ಸಚಿವರೆ, ಚಾಮರಾಜ ನಗರದಲ್ಲಿ ಯಾವುದೋ ಒಂದು ಘಟನೆಯು ನಡೆಯಿತು ಎನ್ನುವ ಕಾರಣಕ್ಕಾಗಿ ಶಾಂತಿ ಸಮಿತಿಯ ಸಭೆಯನ್ನು ಕರೆದಾಗ ಆ ಸಭೆಗೆ ಬಂದಂತಹ 7 ಜನರನ್ನು ಬಂಧನ ಮಾಡಿದ್ದಾರೆ. ಅದರಲ್ಲಿ ಬಿ.ಜೆ.ಪಿ.ಯ ಇಬ್ಬರು ಪುರಸಭೆಯ ಸದಸ್ಯರೂ ಸಹ ಇದ್ದಾರೆ. ನಾನು ಇಲ್ಲಿ ಪ್ರಸ್ತಾಪ ಮಾಡುವುದು ಏನೆಂದರೆ ಘಟನೆಯ ಬಗ್ಗೆ ಪ್ರಸ್ತಾವವನ್ನು ನಾನು ಇಲ್ಲಿ ಪ್ರಸ್ತಾಪ ಮಾಡಿಲ್ಲ. ಕಾನೂನಿನ ಸುವ್ಯವಸ್ಥೆಯ ಬಗ್ಗೆ ಕ್ರಮ ತೆಗೆದುಕೊಂಡು ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವುದಕ್ಕೆ ನಮ್ಮದು ಏನೂ ಅಭ್ಯಂತರವಿಲ್ಲ. ನಾನು ಅಲ್ಲಿರತಕ್ಕಂತಹ ಸಬ್ ಡಿವಿಷನ್ ನ್ಯಾಯಾಧೀಶರು ತನ್ನ ಕಾನೂನಿನ ಚೌಕಟ್ಟನ್ನು ಮೀರಿ ಒಂದು ಆದೇಶವನ್ನು ಕೊಟ್ಟಿದ್ದಾರೆ. ಅದರಲ್ಲಿ ಏನಿದೆ ಎಂದರೆ ಆರೋಪಿಗಳಾದ ನೀವು ಹತ್ತು ಸಾವಿರ ರೂಪಾಯಿಗಳ ಬಾಂಡನ್ನು ಹಾಗೂ ಮೂರು ವರ್ಷಗಳವರೆಗೆ ಉತ್ತಮ ನಡವಳಿಕೆಯ ಬಗ್ಗೆ ನೀಡತಕ್ಕದ್ದು. ಹಾಗೂ ಚಾಮರಾಜನಗರಕ್ಕೆ ಸೇರಿದ ಜಾಲ್ತಿ ತಿಂಗಳಿನಲ್ಲಿಯೇ ಒಂದು ಲಕ್ಷ ರೂಪಾಯಿಗಳ ಸ್ಯಾಲರಿ ಸರ್ಟಿಫಿಕೇಟನ್ನು ಹೊಂದಿರುವಂತಹ ವ್ಯಕ್ತಿಯ ಜಾಮೀನ್ನನ್ನು ಮತ್ತು ಕಳೆದ 15 ವರ್ಷಗಳಿಂದ

ಚಾಮರಾಜನಗರದಲ್ಲಿಯೇ ವಾಸವಾಗಿರುವ ಇಬ್ಬರು ಗೌರವಾನ್ವಿತ ಮುಸಲ್ಮಾನ್ ಜಾತಿ ವ್ಯಕ್ತಿಯ ಜಾಮೀನನ್ನು ನೀಡತಕ್ಕದ್ದು ಎಂದು ಈ ನ್ಯಾಯಾಲಯವು ಅಭಿಪ್ರಾಯ ಪಟ್ಟಿದೆ ಎಂದು ಹೇಳಿದ್ದಾರೆ. ಇದು ಕಾನಸ್ಟಿಟ್ಯೂಶನ್‌ನಲ್ಲಿ ಎಲ್ಲಿಯೂ ಅವಕಾಶವಿಲ್ಲ. ಸುಪ್ರೀಂ ಕೋರ್ಟಿನವರು ಯಾವುದೇ ಜಾತಿಯ ವ್ಯಕ್ತಿಯನ್ನು ಜಾಮೀನು ಕೊಡಿ ಎಂದು ಹೇಳತಕ್ಕದ್ದು ತಪ್ಪು ಎಂದು ಹೇಳುವಂತಹ ತೀರ್ಪನ್ನು ಕೊಟ್ಟಿದ್ದಾರೆ. ಮತ್ತು ಈ ಕೇಸನಲ್ಲಿ ಯಾವ ಒಂದು ಸೆಕ್ಷನ್ ಪ್ರಕಾರ ಕೇಸನ್ನು ಬುಕ್ ಮಾಡಿದ್ದಾರೆ ಅದಕ್ಕೆ ಒಂದು ವರ್ಷದ ಅವಧಿ ಚಾಂಡ್ ಸಾಕು. ಅಂದರೆ ಮೂರು ವರ್ಷಕ್ಕೆ ಕೇಳುವುದಕ್ಕೆ ಬರುವುದಿಲ್ಲ. ಇದರಿಂದ ಒಂದು ರೀತಿ ರಾಜಕೀಯ ಚಿತಾವಣೆಯಿಂದ ಆ ರೀತಿಯಾಗಿ ಕೇಳುವಂಥದ್ದು ಆಗಿದೆ. ನಾವು ಏನು ಬೇಡಿಕೆಯನ್ನು ಈ ಸದನದ ಮುಂದೆ ಇಟ್ಟಿದ್ದೇವೆ ಎಂದರೆ ಅದು ಅಸಿಸ್ಟೆಂಟ್ ಕಮೀಷನರ್ ಬಗ್ಗೆ ಅಲ್ಲ. ಈ ರೀತಿಯಾಗಿ ಕಾನೂನು ಬಾಹಿರವಾಗಿ ಮನಬಂದಂತೆ ಮಾಡುವಂತಹ ಅಧಿಕಾರಿಯನ್ನು ನಿಯಂತ್ರಣದಲ್ಲಿ ಇಡಬೇಕಲ್ಲ. ಅದಕ್ಕಾಗಿ ಈ ಅಧಿಕಾರಿಯನ್ನು ಎನಕ್ವೈರಿ ಮಾಡಿ ತಕ್ಷಣ ಸಸ್ಪೆಂಡ್ ಮಾಡಿ ಅಗತ್ಯ ಇದ್ದರೆ ಇಂತಹ ವ್ಯಕ್ತಿಯನ್ನು ಡಿಸ್ಮಿಸ್ ಮಾಡಿ, ಇವರು ದುರಹಂಕಾರದಿಂದ ಕಾನೂನು ಬಾಹಿರವಾಗಿ ನಡವಳಿಕೆಯನ್ನು ಮಾಡುವುದಲ್ಲ. ನೀವು ಹೀಗೆ ಮಾಡಿದ್ದರೆ ಈ ಸರ್ಕಾರಕ್ಕೆ ಗೌರವ ಬರುವುದಿಲ್ಲ. ಈ ಬಗ್ಗೆ ಸ್ಪಷ್ಟೀಕರಣಬೇಕೆಂದು ನೀಡಬೇಕೆಂದು ನಾನು ಕೇಳಿದ್ದೆ. ಅಲ್ಲಿ ಅಮರಣಾಂತರ ಉಪವಾಸವನ್ನು ಮಾಡುತ್ತಿದ್ದಾರೆ ನಾನು ನಿಮ್ಮ ಮೂಲಕ ವಿನಂತಿಯನ್ನು ಮಾಡುವುದು ಏನೆಂದರೆ ಈ ಕೇಸನ್ನು ವಾಪಸ್ಸು ತೆಗೆದುಕೊಳ್ಳಿ ಅಸಿಸ್ಟೆಂಟ್ ಕಮೀಷನರ್ ಬಗ್ಗೆ ಕಾನೂನಿನಂತೆ ಕ್ರಮವನ್ನು ತೆಗೆದುಕೊಳ್ಳಿ ಎಂದು ಒತ್ತಾಯವನ್ನು ಮಾಡಿದ್ದೆ. ದಯಮಾಡಿ ಉತ್ತರವನ್ನು ಕೊಡಿಸಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಪ್ರತಿ ಸಂದರ್ಭದಲ್ಲಿಯೂ ಚಾಮರಾಜನಗರದಲ್ಲಿ ಇಂತಹ ಪರಿಸ್ಥಿಯು ನಿರ್ಮಾಣವಾಗುತ್ತಿರುತ್ತದೆ. ಇದರಿಂದ ಈ ಮೂಲಕ ಸರ್ಕಾರಕ್ಕೆ ಅತ್ಯಂತ ಕಳಕಳಿಯಿಂದ ಮನವಿಯನ್ನು ಮಾಡುವುದು ಏನೆಂದರೆ, ಅಲ್ಲಿ ಸಮಗ್ರವಾಗಿ ಶಾಂತಿಯನ್ನು ಕಾಪಾಡತಕ್ಕಂತಹ ಜವಾಬ್ದಾರಿ ಪೋಲೀಸ್ ಇಲಾಖೆಯ ಜವಾಬ್ದಾರಿ, ಪೋಲೀಸ್ ಇಲಾಖೆಯ ಸಚಿವರು ಈ ಸದನದಲ್ಲಿ ಇದ್ದಾರೆ ಅದುದರಿಂದ ತಮ್ಮ ಮೂಲಕ ನಾನು ಅವರಲ್ಲಿ ಮನವಿಯನ್ನು ಮಾಡಿಕೊಳ್ಳುವುದು ಏನೆಂದರೆ, ಆ ಒಂದು ಗಡಿ ಪ್ರದೇಶದಲ್ಲಿ ಅಶಾಂತವಾದಂತಹ ವಾತಾವರಣ ನಿರ್ಮಾಣವಾಗದಂತಹ ರೀತಿಯಲ್ಲಿ ಸಹಬಾಳ್ವೆಯಿಂದ ಜನ ಬದುಕತಕ್ಕಂತಹ ವ್ಯವಸ್ಥೆಯಾಗಬೇಕು ಅದಕ್ಕೆ ಯಾವ್ಯಾವ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಾಕಬೇಕು ಅದನ್ನು ಪ್ರಾಮಾಣಿಕವಾಗಿ ಹಾಕಬೇಕೆಂದು ಹೇಳಿ ಅವರಿಗೆ ಕಳಕಳಿಯಿಂದ ನಿಮ್ಮ ಮೂಲಕ ಮನವಿಯನ್ನು ಮಾಡುತ್ತಿದ್ದೇನೆ. ಅಲ್ಲಿ ಪ್ರತಿಸಾರಿ ತಾವು ನೋಡುತ್ತಿರುವಂತೆಯೇ ಸುಮ್ಮನೆ ಕಿಡಿಯು ಹಾರಿತು ಎಂದರೆ ಇಡೀ ರಾಜ್ಯಕ್ಕೆ ಒಂದು ರೀತಿಯಲ್ಲಿ ಆಗುತ್ತದೆ. ಯಾವ ಕಾರಣಕ್ಕೆ ಈ ರೀತಿಯಾಗುತ್ತದೆ ಎನ್ನುವುದರ ಬಗ್ಗೆ. ಸಮಗ್ರವಾದ ಚರ್ಚೆಗಿಂತ ಹೆಚ್ಚಾಗಿ ನನ್ನ ಕಳಕಳಿಯ ಮನವಿ ಏನೆಂದರೆ ಶಾಂತಿಯನ್ನು ಕಾಪಾಡುವುದಕ್ಕೆ ತಾವುಗಳೆಲ್ಲರೂ ಸಿದ್ಧರಾಗಬೇಕು ಎಂಬುದು ಒಂದು. ಮತ್ತು ಸರ್ಕಾರ ಅಲ್ಲಿ ಶಾಂತಿಯನ್ನು ಉಳಿಸುವುದಕ್ಕೆ ಏನು ಮಾಡಬೇಕು ಎನ್ನತಕ್ಕಂಥದ್ದುಕ್ಕೆ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಗೃಹ ಸಚಿವರನ್ನು ಕಳಕಳಿಯಿಂದ ಮನವಿಯನ್ನು ಮಾಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜರವರು ಹೇಳಿರತಕ್ಕಂತಹ ಸಲಹೆಯನ್ನು ನಾನು ಗಮನಕ್ಕೆ ತೆಗೆದುಕೊಂಡಿದ್ದೇನೆ. ಅಲ್ಲಿ ಶಾಂತಿಯನ್ನು ಕಾಪಾಡಲಿಕ್ಕೆ ಅವರು ಕೊಡತಕ್ಕಂತಹ ಸಹಕಾರ, ಅವರ ಮನವಿ ಇದಷ್ಟೆಲ್ಲಾ ನಾನು ಸ್ವಾಗತ ಮಾಡುತ್ತೇನೆ. ಚಾಮರಾಜನಗರದಲ್ಲಿ ಪೋಲೀಸ್ ವ್ಯವಸ್ಥೆಯಲ್ಲಿ ಶಾಂತಿಯನ್ನು ಕಾಪಾಡುವ ದೃಷ್ಟಿಯಿಂದಾಗಿ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಏನು ಪ್ರಸ್ತಾವ ಮಾಡಿದ್ದಾರೆ ಚಾಮರಾಜನಗರದ ಕೆಲವು ನಾಗರಿಕರನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ ಎಂಬುದು ಅದು ನಿಜ. ಇದು ಆದನಂತರ ಅಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ ಎನ್ನುವಂತಹ ವರದಿಯೂ ಸಹಿತ ನನಗೆ ತಲುಪಿದೆ. ನಿನ್ನೆ ದಿವಸವೇ ಇದರ ಬಗ್ಗೆ ನನಗೆ ವರದಿ ಬಂದಿದೆ. ಇದಾದನಂತರ ಅವರಿಗೆ ಚಿಕಿತ್ಸೆಗೋಸ್ಕರ ಎಂದು ಹೇಳಿ ಮೈಸೂರಿನ ಜೈಲಿನಿಂದ ಕೆ.ಆರ್. ಆಸ್ಪತ್ರೆಗೆ ಕಳುಹಿಸಿಕೊಡಲಾಗಿದೆ. ಇದು ಒಂದು ಭಾಗ. ಅಸಿಸ್ಟೆಂಟ್ ಕಮೀಷನರರವರು, ಅವರಿಗೆ ಮುಚ್ಚಳಿಕೆಯನ್ನು ಮುಸಲ್ಮಾನ ಮುಖಂಡರೇ ಗ್ಯಾರಂಟಿಯನ್ನು ನೀಡಬೇಕು ಎನ್ನತಕ್ಕಂತಹ ವಿಚಾರ ಮತ್ತು ಅವರ ವರ್ತನೆಯ ಬಗ್ಗೆ ವಿಚಾರಣೆಯನ್ನು ಮಾಡಬೇಕೆಂದು ಏನು ಕೊಟ್ಟಿದ್ದಾರೆ, ನಿನೆಯ ದಿವಸ ಮಾನ್ಯ ಉಪ ಮುಖ್ಯಮಂತ್ರಿಗಳು ಇದಕ್ಕೆ ಉತ್ತರವನ್ನು ಕೊಟ್ಟು ವಿಚಾರಣೆಯನ್ನು ಮಾಡಿ ಈ ಸಭೆಗೆ ತಿಳಿಸುತ್ತೇವೆಂದು ಹೇಳಿದ್ದಾರೆ. ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ಒಂದೆರಡು ದಿನಗಳಲ್ಲಿ ಇದರ ಬಗ್ಗೆ ಈ ಸದನಕ್ಕೆ ತಿಳಿಸುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರಿಗೆ ಆರೋಗ್ಯ ಸರಿ ಇಲ್ಲ. ಅವರು ಅಲ್ಲಿಯೇ ಸಾಯಬೇಕೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) : ಅವರನ್ನು ಆಸ್ಪತ್ರೆ ಕಳುಹಿಸಿದ್ದೇವೆ. ಅವರು ಆರೋಗ್ಯವಾಗಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ಅವರುಗಳನ್ನು ಶಾಂತಿಯ ಸಭೆಗೆ ಕರೆಯುತ್ತೀರಿ, ಅವರು ಒಬ್ಬ ಚುನಾಯಿತ ಪ್ರತಿನಿಧಿಗಳು. ತಪ್ಪು ಆಗಿದ್ದರೆ ಅರೆಸ್ಟ್ ಮಾಡಿ ಜೈಲಿಗೆ ಕಳುಹಿಸಿ ಕಾನೂನಿನ ಕ್ರಮವನ್ನು ಬೇಕಾದರೆ ತೆಗೆದುಕೊಳ್ಳಿ ನನ್ನದು ಏನು ಅಭ್ಯಂತರವಿಲ್ಲ, ಮೇಲ್ನೋಟಕ್ಕೆ ಯಾವ ಅಸಿಸ್ಟೆಂಟ್ ಕಮೀಷನರ್ ಕಾನೂನು ಬಾಹಿರವಾಗಿ ತನ್ನ ಒಂದು ಮಿತಿಯನ್ನು ಮೀರಿ ಈ ರೀತಿಯಾದ ಒಂದು ಆಜ್ಞೆ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ, ಭಾರತದ ಇತಿಹಾಸದಲ್ಲಿ ಒಬ್ಬ ಜನಾಂಗದ, ಒಬ್ಬ ಜಾತಿಯ ಮುಖಂಡರ ಜಾಮೀನನ್ನು ಕೊಡಿ ಎಂದು ಕೇಳಿರತಕ್ಕಂಥದ್ದನ್ನು ಬಹುಶಃ ನಾವು ಜಗತ್ತಿಲ್ಲಿ ಕೇಳಿಲ್ಲ. ಈ ರೀತಿಯಾಗಿ ಉದ್ಧಟತನದಿಂದ ವರ್ತನೆಯನ್ನು ಮಾಡಿದಾಗ ತಾವು ಈ ಒಂದು ಷರತ್ತುಗಳನ್ನ ತೆಗೆದುಹಾಕಿ ಅವರನ್ನು ಬಿಡುಗಡೆ ಮಾಡುವಂಥದ್ದು, ಮತ್ತೊಂದು ಸ್ಪಷ್ಟೀಕರಣವನ್ನು ಪಡೆದು, ವಿವರವನ್ನು ಪಡೆದು ಕಾನೂನಿನಂತೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಅಲ್ಲಿಯವರೆಗೆ ಅವರನ್ನು ಅಮಾನತ್ತಿನಲ್ಲಿಡಿ. ಆ ಜೈಲಿನಲ್ಲಿರತಕ್ಕ ನಿರಪರಾಧಿಗಳನ್ನು ಬಿಡುಗಡೆ ಮಾಡುವಂಥದ್ದು

ಮಾನವೀಯತೆಯಿಂದ ಆಗಬೇಕಲ್ಲ! ಇಲ್ಲಿ, ಶ್ರೀ ಯಡಿಯೂರಪ್ಪನವರೇ, ಬಿ.ಜೆ.ಪಿ.ಯವರಿಗೆ ನಾವು ಇದೇ ರೀತಿಯಾಗಿ ಟ್ರೀಟ್ ಮಾಡುತ್ತೇವೆ ಎನ್ನುವುದಾದರೆ ಯಾರಾದರೂ ಚುನಾಯಿತ ಪ್ರತಿನಿಧಿಗಳು ಕೆಲಸ ಮಾಡುವುದಕ್ಕೆ ಆಗುತ್ತದೆಯೇ? ತಾವು ಒಪ್ಪುತ್ತೀರೋ? ಈ ಗಲಭೆಯಲ್ಲಿ ಅವನು ಇದ್ದರೆ ಕಾನೂನಿನಂತೆ ಕ್ರಮ ತೆಗೆದುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) : ಇದರಲ್ಲಿ ಚುನಾಯಿತ ಪ್ರತಿನಿಧಿಗಳು ಅಥವಾ ಮುಖಂಡರ ಪ್ರಶ್ನೆ ಬರುವುದಿಲ್ಲ. ಈಗ ಅವರ ಬ್ಯಾಕ್‌ಗ್ರೌಂಡ್ ಎಲ್ಲಾ ಇವತ್ತು ಏನು ಹೊಸದಾಗಿ ಆಗಿರತಕ್ಕಂಥದ್ದು ಅಲ್ಲ, ಹಿಂದೆ ಸಹಿತ ಇವರ ಬ್ಯಾಕಗ್ರೌಂಡ್ ಇರತಕ್ಕಂಥದ್ದು. ಆ ಪಕ್ಷದವರು ಈ ಪಕ್ಷದವರು ಅಂತ ಇಲ್ಲ. ಕಾನೂನಿನ ದೃಷ್ಟಿಯಿಂದಾಗಿ ನಾನು ನೋಡಿಲಿಕ್ಕೆ ತಯಾರು ಇಲ್ಲ. ಇವತ್ತು ಶಾಂತಿಯನ್ನು ಕಾಪಾಡುವ ದೃಷ್ಟಿಯಿಂದಾಗಿ ಏನು ...

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಇವತ್ತು ಅವರನ್ನು ರಿಲೀಜ್ ಮಾಡುತ್ತಿರೋ ಅಥವಾ ಇಲ್ಲವೋ ಅಂತ ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) : ನಾನು ರಿಲೀಜ್ ಮಾಡುತ್ತೇನೆಂದು ಈಗ ಸದನದಲ್ಲಿ ಹೇಳುವುದಕ್ಕಾಗುವುದಿಲ್ಲ. ಯಾವ ಕಾರಣದಿಂದ ತೆಗೆದುಕೊಂಡಿದ್ದಾರೋ, ಏತಕೋಸ್ಕರವಾಗಿ ತೆಗೆದುಕೊಂಡಿದ್ದಾರೋ ಗೊತ್ತಿಲ್ಲ. ಅಲ್ಲಿ ಉಪವಾಸವನ್ನು ಮಾಡುತ್ತಿದ್ದಾರೆ ಅದು ನಿಜ. ಅದಕೋಸ್ಕರವಾಗಿ ಕ್ರಮ ತೆಗೆದುಕೊಳ್ಳಬೇಕು. ಬಂಧಿತರನ್ನು ಆಸ್ಪತ್ರೆಗೆ ಸೇರಿಸಿದ್ದೇವೆ ಕಾನೂನಿನ ಪ್ರಕಾರ ಅಲ್ಲಿ ಶಾಂತಿ ಪರಿಪಾಲನೆ ಮಾಡುವ ಸಲುವಾಗಿ ಏನು ಮಾಡಬೇಕು ಎನ್ನುವ ಬಗ್ಗೆ ವಿಚಾರ ಮಾಡಿ ನೋಡುತ್ತೇನೆ. ಆದರೆ ಅಸಿಸ್ಟೆಂಟ್ ಕಮೀಷನರಏನಾದರೂ ತಪ್ಪು ಮಾಡಿದ್ದರೆ ಅಥವಾ ತಪ್ಪು ತಪ್ಪಾಗಿರುವವರನ್ನು ಅರೆಸ್ಟ ಮಾಡಿರುವುದು ಕಂಡುಬಂದ್ದಲ್ಲಿ ಅದಕ್ಕೆ ಬೇಕಾಗಿರುವ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

12.30 ಪಿ.ಎಂ.

ಶ್ರೀಮತಿ ಎಸ್. ಪ್ರಮೀಳಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೆ, ಯಾರಿಗಾದರೂ ಜಾಮೀನು ಕೊಡಬೇಕಾದ ಸಂದರ್ಭದಲ್ಲಿ ಹಿಂದೂಗಳು ಅರೆಸ್ಟ್ ಆದಾಗ ಮಹಮದೀಯರಿಂದ ಜಾಮೀನು ಕೊಡಬೇಕೆಂದು ಕಾನೂನಿನಲ್ಲಿದೆಯೆ? ಇದುವರೆಗೆ ಸಿವಿಲ್ ಪ್ರೊಸೀಜರ್ ಕೋಡ್‌ನಲ್ಲಾಗಲಿ ಕ್ರಿಮಿನಲ್ ಪ್ರೊಸೀಜರ ಕೋಡನಲ್ಲಾಗಲಿ, ಅಥವಾ ಕಾನಸ್ಟಿಟ್ಯೂಷನ್‌ನಲ್ಲಾಗಲಿ, ಹಿಂದೂಗಳನ್ನು ಅರೆಸ್ಟ್ ಮಾಡಿದಾಗ ಗೌರವಾನ್ವಿತ ಮಹಮದೀಯರನ್ನು ಕರೆದುಕೊಂಡು ಬಂದು ಜಾಮೀನು ಕೊಡಬೇಕೆಂದಿದ್ದರೆ ದಯವಿಟ್ಟು ತೋರಿಸಿ. ಅಕಸ್ಮಾತ್ ಇಂಥದ್ದು ಕಾನೂನಿನಲ್ಲಿ ಇಲ್ಲವೆಂದು ತಿಳಿದುಬಂದರೆ ಕೂಡಲೇ ಅವರನ್ನು ಬೇಷರತ್ ಆಗಿ ಬಿಡುಗಡೆ ಮಾಡಬೇಕೆಂದು ತಾವು ನಿನ್ನೆಯೇ ಆರ್ಡರ್ ಮಾಡಬೇಕಾಗಿತ್ತು. ಇಂಥಾದ್ದು ಯಾವ ಕಾನೂನಿನಲ್ಲೂ ಇಲ್ಲ. ಇಂಥ ಆರ್ಡರನ್ನು ಯಾವ ಕೋರ್ಟಿನಲ್ಲೂ ಇದುವರೆಗೂ ಮಾಡಿಲ್ಲ. ಇವತ್ತು ಹಿಂದೂಗಳ ಸೆಂಟಿಮೆಂಟನ್ನು ಅಗ್ರವೇಟ್ ಮಾಡತಕ್ಕ ಆರ್ಡರನ್ನು ಅಲ್ಲಿಯ ಅಸಿಸ್ಟೆಂಟ್ ಕಮೀಷನರ್‌ರವರು ಮಾಡಿದ್ದಾರೆ. ಇಡೀ ಕರ್ನಾಟಕದಲ್ಲಿರತಕ್ಕ ಎಲ್ಲ ಹಿಂದೂಗಳ

ಮನಸ್ಸಿಗೂ ಅತ್ಯಂತ ಆಘಾತವಾಗಿದೆ. ಇದನ್ನು ತಾವು ಯೋಚನೆ ಮಾಡದೆ, ಇನ್ನೂ ಮಾಡುತ್ತೇವೆ ಎಂದು ಮೀನಾಮೇಶ ಎಣಿಸುತ್ತಾ ಎನಕ್ವೈರಿ ಮಾಡುತ್ತೇವೆಂದು ತಾವು ಹೇಳುವುದಾದರೆ ನಾವು ಏನು ಹೇಳಬೇಕು. ಇದರ ಬಗ್ಗೆ ತಾವು ಯೋಚನೆ ಮಾಡಬೇಕು. ಈ ರೀತಿಯಲ್ಲಿ ಅಧಿಕಾರವನ್ನು ಕಾನೂನನ್ನು ದುರುಪಯೋಗ ಮಾಡಿಕೊಂಡು, ಗೌರವಾನ್ವಿತ ಮಹಮ್ಮದೀಯರನ್ನೇ ಕರೆದುಕೊಂಡು ಬನ್ನಿ ಎಂದು ಆರ್ಡರ್ ಮಾಡಿರುವುದು ಸರಿಯೆ? ಮಹಮ್ಮದೀಯರನ್ನು ಏತಕ್ಕೆ ಜಾಮೀನು ಕೊಡಬೇಕೆಂಬುದು ಇಲ್ಲ. 15 ವರ್ಷದಿಂದ ಅಲ್ಲೇ ಇರತಕ್ಕ ಗೌರವಾನ್ವಿತ ಮಹಮ್ಮದೀಯ ಎಂದರೆ ನಾವು ಅಂಥವರನ್ನು ಎಲ್ಲಿಂದ ಹುಡುಕಿಕೊಂಡು ಬರೋಣ? ಇಂಥ ಕಾನೂನು ಎಲ್ಲಾದರೂ ಇದೆಯೇ, ಎಂಬುದನ್ನು ತಾವು ಯೋಚನೆ ಮಾಡಬೇಕು. ಇಂಥ ಕಾನೂನು ಇಲ್ಲದಿದ್ದರೆ ಏನು ಮಾಡಬೇಕೆಂಬುದನ್ನು ಯೋಚನೆ ಮಾಡಬೇಕು. ಇದರ ಬಗ್ಗೆ ತಾವು ಉತ್ತರವನ್ನೇ ಕೊಟ್ಟಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ತಾವು ಹೇಳಿರತಕ್ಕ ಎಲ್ಲ ವಿಚಾರಗಳನ್ನೂ ನಾನು ನಿಷ್ಪಕ್ಷಪಾತವಾಗಿ ವಿಚಾರಣೆ ಮಾಡಿಸುತ್ತೇನೆ. ಇವತ್ತೇ ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಚರ್ಚೆಮಾಡುತ್ತೇನೆ. ನನಗೆ ಒಂದೆರಡು ದಿನ ....

ಶ್ರೀಮತಿ ಪ್ರಮೀಳಾ ನೇಸರ್ಗಿ : ಪ್ರತಿಯೊಂದರಲ್ಲೂ ಮನುಷ್ಯನ ಲಿಬರ್ಟಿಯನ್ನು ಕಿತ್ತುಕೊಳ್ಳುವುದಕ್ಕೆ ಪ್ರಯತ್ನ ನಡೆಯುತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ಉತ್ತರ ಕೊಡುವುದಕ್ಕೂ ಅವಕಾಶ ಕೊಡದಿದ್ದರೆ ಏನು ಮಾಡಲಿ?

ಶ್ರೀ ವಾಟಾಳ್ ನಾಗರಾಜ್ : ಯಾರನ್ನಾದರೂ ಬಿಡುಗಡೆ ಮಾಡಬೇಕೆಂದರೆ ಇಂಥಿಂಥವರನ್ನೇ ಜಾಮೀನು ಕೊಡಬೇಕೆಂದು ನೇರವಾಗಿ ಹೇಳುವಂಥ ಆಜ್ಞೆ ಸರ್ಕಾರದಲ್ಲಿದೆಯೆ? ಇದೆ ಎಂದರೆ ಆಗಲಿ ಪ್ರಶ್ನೆ ಬೇರೆ ಆಗುತ್ತದೆ. ಇದೆಯೇ ಇಲ್ಲವೇ ಎಂಬುದನ್ನು ತಾವು ಸ್ಪಷ್ಟಪಡಿಸಿದರೆ ಒಳ್ಳೆಯದು. ನನಗೆ ತಿಳಿದಮಟ್ಟಿಗೆ ಬಹುಶಃ ಎಲ್ಲೂ ಕೂಡ ಕಾನೂನಿನಲ್ಲಿ ಇಂಥಾದ್ದು ಎರಡು ಹೇಳುತ್ತಿರುವುದನ್ನು ನಾವು ಎಲ್ಲೂ ಕಂಡಿಲ್ಲ. ಇಲ್ಲಿ ಮಾನ್ಯ ಸಂಸದೀಯ ಮಂತ್ರಿಗಳಿದ್ದಾರೆ....

ಉಪಾಧ್ಯಕ್ಷರು : ನೀವು ಎಲ್ಲಾ ವಿಷಯಗಳನ್ನೂ ಪ್ರಸ್ತಾಪ ಮಾಡುತ್ತಾ ಹೋದರೆ ಹೇಗೆ? ಅವರು ಹೇಳುತ್ತಾರೆ ಕೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಗೌರವಾನ್ವಿತ ಮಾನ್ಯ ಸದಸ್ಯರು ಹೇಳಿರುವಂಥ ವಿಚಾರಗಳು ಎಷ್ಟರ ಮಟ್ಟಿಗೆ ನಿಜ, ಅಲ್ಲಿ ಏನು ನಡೆದಿದೆ ಎಂಬುದನ್ನು ನಾನು ವಿಚಾರಣೆ ಮಾಡಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾವಾಗ ಮಾಡುತ್ತೀರಿ? ಅಲ್ಲಿ ಜೈಲಿನಲ್ಲಿ ಉಪವಾಸ ಮಾಡುತ್ತಿದ್ದಾರೆ, ಕಾನೂನು ಬಾಹಿರವಾಗಿ, ದುರುದ್ದೇಶದಿಂದ ಚುನಾಯಿತ ಪ್ರತಿನಿಧಿಗಳನ್ನು ಜೈಲಿನಲ್ಲಿರುವಂಥ ಕೆಲಸವನ್ನು ನಿಮ್ಮ ಅಸಿಸ್ಟೆಂಟ್ ಕಮೀಷನರ್ ಮಾಡಿದ್ದಾನೆ. ಇದಕ್ಕೆ ನಿಮ್ಮ ಸರ್ಕಾರದವರು ಕುಮ್ಮಕ್ಕನ್ನು ಏನಾದರೂ ಕೊಡುತ್ತಿದ್ದೀರೋ? ಮೇಲ್ನೋಟಕ್ಕೆ ಇದು ಕಾನೂನು

ಬಾಹಿರ ಎಂದು ಕಾಣಿಸುತ್ತಿರುವುದರಿಂದ ನ್ಯಾಯವಾಗಿ ನೀವು ಆ ಅಸಿಸ್ಟೆಂಟ್ ಕಮೀಷನರರನ್ನು ಸಸ್ಪೆಂಡ್ ಮಾಡಬೇಕಾಗಿತ್ತು. ಒಂದುವೇಳೆ ನಿಮ್ಮ ಸರ್ಕಾರದ ನಿಲುವು ಏನಾದರೂ ಬಿ.ಜೆ.ಪಿ.ಯ ಕಾರ್ಯಕರ್ತರಮೇಲೆ, ಚುನಾಯಿತ ಪ್ರತಿನಿಧಿಗಳ ಮೇಲೆ ಸುಳ್ಳು ಮೊಕದ್ದಮೆಗಳನ್ನು ಹೂಡಿ ಜೈಲಿಗೆ ಹಾಕುವುದು ಉದ್ದೇಶವಿದೆಯೇ? ಅಲ್ಲಿ ಅವರು ಅಮರಣಾಂತ ಉಪವಾಸ ಮಾಡುತ್ತಿದ್ದಾರೆ. ಮುಸ್ಲಿಮರೇ ಜಾಮೀನು ಕೊಡಬೇಕೆಂದು ಹೇಳಿ ಜಾತಿಯ ವಿಷ ಬೀಜವನ್ನು ಬಿತ್ತುವಂಥ ಕೆಲಸವನ್ನು ಒಬ್ಬ ಅಧಿಕಾರಿ ಮಾಡುತ್ತಿದ್ದಾನೆಂದರೆ ಅವನನ್ನು ನೀವು ಡಿಸಮಿಸ್ ಮಾಡಬಾರದೆ? ಅವರನ್ನು ಸಸ್ಪೆಂಡ್ ಮಾಡಿ ಎನಕ್ವೈರಿ ಮಾಡಬೇಕಲ್ಲಾ? ಆ ಅಸಿಸ್ಟೆಂಟ್ ಕಮೀಷನರರವರು ಮಾಡಿರುವಂಥ ಆರ್ಡರ್ ಕಾಪಿಯನ್ನು ನಿನ್ನೆ ಮಾನ್ಯ ಜಾಲಪ್ಪನವರಿಗೆ ಕೊಟ್ಟಿದ್ದೇನೆ. ನಾನು ನಿನ್ನೆ ಈ ವಿಷಯವನ್ನು ದಿಢೀರ್ ಎಂದು ಪ್ರಸ್ತಾಪ ಮಾಡಲಿಲ್ಲ. ಈ ಬಿ.ಜೆ.ಪಿ. ಕಾರ್ಯಕರ್ತರ ವಿರುದ್ಧ ನಿಮ್ಮ ಮನಬಂದಂತೆ ನಡೆದುಕೊಳ್ಳಬಹುದು, ಅವರಿಗೆ ಏನು ಬೇಕಾದರೂ ಕಿರುಕುಳ ಕೊಡಬಹುದೆಂಬುದು ನಿಮ್ಮ ಸರ್ಕಾರದ ನಿಲುವಾದರೆ ನಾವು ಏನು ಮಾಡಬೇಕು?

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ಬಂದಿರತಕ್ಕದ್ದು, ಇಂಥ ಕೋಮಿನವರನ್ನೇ ಜಾಮೀನು ಕೊಡಬೇಕೆಂದು ಬರೆದಿರುವುದು ತೀರಾ ಅತಿರೇಖವಾಗುತ್ತದೆ. ನಿನ್ನೆ ಇಲ್ಲಿ ಪ್ರಸ್ತಾಪವಾಗಿದೆ. ಆದರೆ ಇದುವರೆಗೂ ಸರ್ಕಾರಕ್ಕೆ ವರದಿ ಬಂದಿಲ್ಲ ಎಂದರೆ ಇದು ಸಮಂಜಸವಲ್ಲ. ನಿಮ್ಮ ಸರ್ಕಾರ ಸತ್ತು ಹೋಗಿದೆ ಎಂದರೆ ನಾವು ಸತ್ತು ಹೋಗಿದ್ದೇವೆಯೇ ಎಂದು ಕುಳಿತುಬಿಡುತ್ತೀರಿ. ನಾವು ಇದನ್ನು ಹೇಳುವಂತಿಲ್ಲ, ಬಿಡುವಂತಿಲ್ಲ. ಇಂಥ ಒಂದು ಸಂಧಿಗ್ಧ ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡಿದ್ದೇವೆ. ಇಂಥ ಅಪಾಯದಲ್ಲಿ ಸಿಕ್ಕಿದ್ದೇವೆ. ಈ ಸರ್ಕಾರ ಬದುಕಿದ್ದರೆ ಎನ್ನತಕ್ಕ ಪದವನ್ನು ನಾವು ಉಪಯೋಗಿಸಬೇಕಾಗಿದೆ. ಈ ಸರ್ಕಾರ ಆ ವರದಿಯನ್ನು ಮಂಡಿಸಿ ಎಂದು ಕೇಳಬೇಕು. ಏಕೆಂದರೆ ಇದು ಸತ್ತುಹೋಗಿದೆ ಎಂದರೆ ನಿಮಗೆ ಕೋಪ. ಬದುಕಿದ್ದರೆ ಎಂದು ಹೇಳಿದರೆ ನಿಮಗೆ ಸಂತೋಷವೇ ಸ್ವಾಮಿ?

ಶ್ರೀ ಕೆ. ವಿಶ್ವೇಶ್ವರ ಹೆಗ್ಡೆ : ಮಾನ್ಯ ಉಪಾಧ್ಯಕ್ಷರೆ, ನಾವು ಆ ಅಸಿಸ್ಟೆಂಟ್ ಕಮೀಷನರ್ ರವರ ಆದೇಶವನ್ನು ನಾವು ಸ್ವತಃ ನೋಡಿ, ಆ ಆದೇಶದ ಪ್ರತಿಯನ್ನೂ ಕೂಡ ನಾವು ಸರ್ಕಾರದ ಮುಂದಿಟ್ಟು ಅದರ ಬಗ್ಗೆ ಸರ್ಕಾರ ಒಂದು ಸ್ಪಷ್ಟ ನಿಲುವನ್ನು ತೆಗೆದುಕೊಳ್ಳಬೇಕೆಂದು ಹೇಳಿದಾಗ ಸರ್ಕಾರ ಮಾತನಾಡುವುದಕ್ಕೆ ಕುಳಿತಾಗ ಪರೋಕ್ಷವಾಗಿ ನಮಗೆ ಕಾಣುತ್ತಿದೆ, ಬಿ.ಜೆ.ಪಿ.ಯ ಎಲ್ಲಾ ಕಾರ್ಯಕರ್ತರ ವಿರುದ್ಧ ಇಂಥದೇ ಆದೇಶಗಳನ್ನು ಕೊಡುವುದರ ಮೂಲಕ ಎಲ್ಲಾ ಬಿ.ಜೆ.ಪಿ.ಯ ಕಾರ್ಯಕರ್ತರನ್ನು ದಮನ ಮಾಡುವಂಥ ನೀತಿಯನ್ನು ಸರ್ಕಾರವೇ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಮಾಡಿದೆ ಎಂದು ಹೇಳಿದರೂ ತಪ್ಪಾಗಲಿಕ್ಕಿಲ್ಲವೆಂದು ನಾನು ಭಾವಿಸಿದ್ದೇನೆ. ಏಕೆಂದರೆ ನೇರವಾಗಿ ಇದೇ ರೀತಿಯ ಆದೇಶಗಳನ್ನು ಮಾಡುವ ವಿಚಾರದಲ್ಲಿ ಸರ್ಕಾರದ ಗಮನಕ್ಕೆ ತಂದು. ಇವತ್ತು ಆಸ್ಪತ್ರೆಯಲ್ಲಿ ಅಮರಣಾಂತ ಉಪವಾಸ ಮಾಡಿದಂಥ ವ್ಯಕ್ತಿಯನ್ನು ಆಸ್ಪತ್ರೆಗೆ ಸೇರಿಸಿದ್ದರೂ ಕೂಡ ಆ ಅಧಿಕಾರಿಯು ಈ ರೀತಿ ಆದೇಶ ಮಾಡಿರುವುದರಿಂದ ಆ ಅಧಿಕಾರಿಯ ಭ್ರಷ್ಟ ನೀತಿಯ ವಿರುದ್ಧ ಅವನ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದಾಗಲೂ ಈ ಸರ್ಕಾರ ಕಣ್ಣುಮುಚ್ಚಾಲೆ ಆಡುತ್ತಿದೆ. ಬಿ.ಜೆ.ಪಿ.ಯ ಕಾರ್ಯಕರ್ತರನ್ನು ಅಮರಣಾಂತಿಕ ಪರಿಸ್ಥಿತಿಯಲ್ಲಿಟ್ಟಿರುವುದು ಸರ್ಕಾರದ ನಿಲುವೆ? ಇದು ನೇರವಾಗಿ

ಹಿಂದೂಗಳನ್ನು ಕೆಣಕುವಂಥಾದ್ದು. ಹಿಂದೂಗಳು ಮುಸಲ್ಮಾನರ ಕಾಲುಬುಡಕ್ಕೆ ಹೋಗಿ ನೀವು ಬಂದು ನಮಗೆ ಜಾಮೀನು ಕೊಡಿ ಎಂದು ಕೇಳುವ ಮಟ್ಟಿಗೆ ಮಾಡಿ ಇವತ್ತು ನಮಗೆ ಮಾನಸಿಕ ಹಿಂಸೆಯನ್ನು ಕೊಡುವಂಥ ಕೆಲಸವನ್ನು ಈ ಸರ್ಕಾರ ಮಾಡುತ್ತಿದೆ. ಇದು ನಮ್ಮ ಕರ್ನಾಟಕ ರಾಜ್ಯದ ಹಿಂದೂಗಳಿಗೆ ಮಾಡಿದಂಥ ಒಂದು ಅಪಮಾನ ಇದು ಎಂದು ನಾವು ಈ ಸದನದಲ್ಲಿ ಹೇಳಬೇಕಾಗಿದೆ. ಇಂಥ ಸ್ವಷ್ಟ ನೀತಿಯ ವಿರುದ್ಧ ಪ್ರತಿಭಟನೆ ಮಾಡಲೇಬೇಕಾಗುತ್ತದೆ.

ಶ್ರೀ ವೈ. ರಾಮಕೃಷ್ಣ : ಈ ಸಂದರ್ಭದಲ್ಲಿ ಸರ್ಕಾರ ಎನು ಮಾಡಬೇಕೆಂಬುದನ್ನು ಹೇಳುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ಈ ರಾಜ್ಯದಲ್ಲಿ, ಈ ರಾಷ್ಟ್ರದಲ್ಲಿ ಕೋಮು ಸೌಹಾರ್ದದ ಬಗ್ಗೆ ಆಸಕ್ತಿ ಎಲ್ಲಾ ಜನಾಂಗದವರಲ್ಲೂ ಇದೆ ಎಂಬ ಬಗ್ಗೆ ಯಾರದ್ದೂ ಭಿನ್ನಾಭಿಪ್ರಾಯ ಇಲ್ಲ. ಒಬ್ಬ ಅಧಿಕಾರಿ ಜಾಮೀನು ಕೊಡುವಂತೆ ಕೇಳುವ ಸಂದರ್ಭದಲ್ಲಿ ಒಬ್ಬ ಮುಸಲ್ಮಾನ ಎನ್ನತಕ್ಕ ಪದವನ್ನು ಬಳಸಿ ಮುಸಲ್ಮಾನರು ಜಾಮೀನು ಕೊಡಬೇಕೆಂದು ನಿಬಂಧನೆ ಹಾಕಿರುವುದರ ಬಗ್ಗೆ ನಾವು ಏನು ಯೋಚನೆ ಮಾಡಬೇಕೆಂಬುದು ನಮ್ಮ ತಲೆಯಲ್ಲಿ ಹೊಳೆಯುತ್ತಿಲ್ಲ. ಈ ವಿಚಾರದಲ್ಲಿ ಸರ್ಕಾರದವರು ಏತಕ್ಕೆ ಹಿಂದೆ ಬಿದ್ದಿದ್ದಾರೆಂಬುದು ನನಗೆ ಅರ್ಥವಾಗುತ್ತಿಲ್ಲ. ಎಲ್ಲಾ ಕೋಮಿನವರೂ ಸೌಹಾರ್ದಯುತವಾಗಿ ನಡೆದುಕೊಂಡು ಹೋಗಬೆಂದಿರುವಾಗ...

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಹಾಗಾದರೆ ಯಾರೋ ಒಬ್ಬ ಮುಸ್ಲಿಮರು ಯಾವುದೋ ಒಂದು ಅಪರಾಧದಲ್ಲಿ ಸಿಕ್ಕಿಬಿದ್ದಾಗ ನೀವು ಹಿಂದೂಗಳ ಜಾಮೀನು ಕೊಡಿ ಎಂದು ಹೇಳಿದರೆ ಆಗ ನೀವು ಇದನ್ನು ಒಪ್ಪುತ್ತೀರೋ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ನಾನು ಜಾಮೀನಿನ ಬಗ್ಗೆ ಹೇಳುತ್ತಿಲ್ಲ. ಸರ್ಕಾರದಲ್ಲಿ ನನ್ನ ಮನವಿ ಏನೆಂದರೆ, ಈ ದೇಶದಲ್ಲಿ ಇರತಕ್ಕ ಅಣ್ಣತಮ್ಮಂದಿರಲ್ಲಿ, ಒಂದು ಕುಟುಂಬದ ಸದಸ್ಯರಲ್ಲಿ ಕಚ್ಚಾಟ, ಹೊಡೆದಾಟ ಆಗುವುದು ಸಹಜ. ಸರ್ಕಾರದ ವತಿಯಿಂದ ಶಾಂತಿಸಭೆಗಳನ್ನು ರಚಿಸಿ ಆವರ ಮುಖಾಂತರ ಆ ಭಾಗಗಳಲ್ಲಿ ಶಾಂತಿಯನ್ನು ಉಂಟುಮಾಡಲು ಎಲ್ಲಾ ಚುನಾಯಿತ ಪ್ರತಿನಿಧಿಗಳಾಗಲಿ, ಸರ್ಕಾರವಾಗಲಿ ಪ್ರಯತ್ನಿಸುವುದು, ಇದರಲ್ಲಿ ಯಶಸ್ವಿಯಾಗಿರುವುದು ಇದೆ. ಆದರೆ ಹಿಂದೂಗಳು ಗಲಾಟೆ ಮಾಡಿದಂಥ ಸಂದರ್ಭದಲ್ಲಿ ಮುಸಲ್ಮಾನರೇ ಜಾಮೀನನ್ನು ಕೊಡಬೇಕೆಂದು ನಿರ್ಬಂಧನೆಯನ್ನು ಹಾಕುವಂಥಾದ್ದು ಬಹಳ ವಿಚಿತ್ರವಾದ ವಿಚಾರ ಎಂದು ಹೇಳಿದರೆ ತಪ್ಪಾಗಲಾರದು. ಆದ್ದರಿಂದ ಸರ್ಕಾರದಲ್ಲಿ ನನ್ನ ಮನವಿ ಏನೆಂದರೆ: ಯಾವುದೇ ಜನಾಂಗದ ಜನರ ಮನಸ್ಸನ್ನೂ ನೋಯಿಸುವಂಥ ಕೆಲಸವನ್ನು ಮಾಡಬೇಡಿ. ತಾವು ನ್ಯಾಯವನ್ನು ಒದಗಿಸಿಕೊಡುವುದರ ಜೊತೆಗೆ ಅಲ್ಲಿ ಆಗಿರುವ ವಿಚಾರದಲ್ಲಿ ತುರ್ತಾಗಿ ಒಂದು ವರದಿಯನ್ನು ತರಿಸಿಕೊಂಡು ಕಾನೂನು ರೀತಿಯಲ್ಲೇ ಅವರನ್ನು ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಿ. ಅವರನ್ನು ಕಾನೂನು ರೀತಿಯಲ್ಲೇ ಬಿಡುಗಡೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸದಸ್ಯರಾದ ಸಗೀರ್ ಅಹಮ್ಮದರವರು ಬಹಳ ಪ್ರಾಮಾಣಿಕವಾದ ಸಲಹೆಯನ್ನು ಕೊಟ್ಟಿರುವುದರಿಂದ ಅವರನ್ನು ನಾನು ಅಭಿನಂದಿಸುತ್ತೇನೆ. ಅಲ್ಲಿ ಮಾನ್ಯ ಆಸಿಸ್ಟೆಂಟ್ ಕಮೀಷನರ್‌ರವರು ಏನು ಕ್ರಮ ಕೈಗೊಂಡಿದ್ದಾರೆ ಇದು ಒಂದು ರೀತಿಯಲ್ಲಿ ಉರಿಯುತ್ತಿರುವ ಬೆಂಕಿಗೆ ಎಣ್ಣೆಯನ್ನು ಸುರಿದಂತಾಗಿದೆ. ಇದು ಅಧಿಕಾರಿ ಆದವನು ಮಾಡುವಂಥ ಕ್ರಮ ಅಲ್ಲ. ಆ ಅಧಿಕಾರಿಗೆ ಯಾವರೀತಿಯಲ್ಲಿ ಈ ಸಲಹ ಬಂತು ಎಂಬುದು ಬೇಕು. ಏಕೆಂದರೆ ಉಪ ವಿಭಾಗಾಧಿಕಾರಿ ಎಂದರೆ ಒಂದು ರೀತಿಯಲ್ಲಿ ನ್ಯಾಯಾಧೀಶರಾಗಿರುತ್ತಾರೆ. ಇಂಥ ಕ್ರಮವನ್ನು ಅವರು ಏನು ಕೊಂಡಿದ್ದಾರೆ ಇಂಥಾದ್ದು ನಮ್ಮ ಕರ್ನಾಟಕ ರಾಜ್ಯದಲ್ಲಿ ಎಲ್ಲೂ ಇಲ್ಲ. ಕಾನೂನು ಪ್ರಕಾರ ಯಾರು ಶಿಕ್ಷೆಯನ್ನು ಅನುಭವಿಸಬೇಕೋ ಅನುಭವಿಸಲಿ. ಯಾರು ಅನ್ಯಾಯ ಮಾಡಿದ್ದಾರೆ, ಯಾರು ಗಲಭೆ ಮಾಡಿದ್ದಾರೆ ಅವರಿಗೆ ಏನು ಬೇಕಾದರೂ ಶಿಕ್ಷೆ ಕೊಡಲಿ. ಆದರೆ ಈ ಪ್ರಕರಣಕ್ಕೆ ಸಂಬಂಧಿದಂತೆ ಸರ್ಕಾರ ತನ್ನ ನೀತಿಯನ್ನು ಸ್ಪಷ್ಟಪಡಿಸಬೇಕು.

ಉಪಾಧ್ಯಕ್ಷರು : ಇವತ್ತು ಇದರ ಬಗ್ಗೆ ಸಂಪೂರ್ಣವಾದ ಚರ್ಚೆ ಮಾಡೋಣ. ಯಾರ್ಯಾರು ಏನೇನು ಮಾತನಾಡುತ್ತೀರೋ ಮಾತನಾಡಿ. ಸರ್ಕಾರದ ಇದರ ಬಗ್ಗೆ ಉತ್ತರ ಕೊಡುವುದು ಏನೂ ಬೇಡ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಗೃಹ ಸಚಿವರಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ, ಇದರ ಬಗ್ಗೆ ಸ್ಪಷ್ಟ ಉತ್ತರವನ್ನು ಕೊಡಬೇಕು.

ಶ್ರೀ ವಿಶ್ವೇಶ್ವರ ಹೆಗ್ಡೆ : ಮಾನ್ಯ ಸಭಾಧ್ಯಕ್ಷರೆ, ಇದರ ಬಗ್ಗೆ ಸರ್ಕಾರದ ಉತ್ತರ ಏನು?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಬಿ.ಜೆ.ಪಿ. ಕಾರ್ಯಕರ್ತರನ್ನು ಈ ರೀತಿ ಸದೆಬಡಿಯಬೇಕೆಂದು ಏನಾದರೂ ಈ ಕೆಲಸವನ್ನು ಮಾಡಿಸಿದ್ದೀರೋ?

(ಗೊಂದಲ)

(ಈ ಹಂತದಲ್ಲಿ ಮಾನ್ಯ ಬಿ.ಎಸ್. ಯಡಿಯೂರಪ್ಪನವರೊಬ್ಬರನ್ನು ಬಿಟ್ಟು ಉಳಿದ ಎಲ್ಲ ಬಿ.ಜೆ.ಪಿ. ಸದಸ್ಯರೂ ಮಾನ್ಯ ಸಭಾಧ್ಯಕ್ಷರ ಮುಂದಿರುವ ಬಾವಿಗೆ ಬಂದು ಧರಣಿ ಪ್ರಾರಂಭಿಸಿದರು).

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್ಕಾರ ಕ್ಷಮೆ ಕೇಳಬೇಕು. ನಾವು ಏನು ಬೇಕಾದರೂ ಮಾಡಬಹೆದು ಎಂದು ತಿಳಿದುಕೊಂಡಿದ್ದಾರೆಯೇ? ಮುಸ್ಲಿಮರಿಂದ ಜಾಮೀನು ಕೊಡುವಂತೆ ಕೇಳಿ ಮುಂದೆ ಬರುತ್ತಿರುವ ಚುನಾವಣೆ ಸಂದರ್ಭದಲ್ಲಿ ವಿಷ ಬೀಜವನ್ನು ಬಿತ್ತುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಯೆ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾರೋ ನಿಮಗೆ ಬೇಕಾದಂಥ ಅಧಿಕಾರಿ ತನ್ನ ಮನಸ್ಸಿಗೆ

ಬಂದಂತೆ ಮಾಡಿದರೆ ಅವನಿಗೆ ರಕ್ಷಣೆಯನ್ನು ಕೊಡುವಂಥ ಕೆಲಸವನ್ನು ನೀವು ಇವತ್ತು ಮಾಡುತ್ತಿದ್ದೀರಿ. ನಿಮಗೆ ಇದರ ಬಗ್ಗೆ ನಾಚಿಕೆ ಆಗಬೇಕಾಗಿತ್ತು. ಜಾತಿಯ ಹೆಸರಿನಲ್ಲಿ ಬಿ.ಜೆ.ಪಿ.ಯವರನ್ನು ಸದೆಬಡಿಯಲು ಕಾನೂನನ್ನು ಕೈಗೆ ತೆಗೆದುಕೊಳ್ಳುವ ಕೆಲಸಮಾಡುತ್ತಿದ್ದೀರಿ. ಚುನಾಯಿತ ಪ್ರತಿನಿಧಿಗಳಿಗೆ ಗೌರವ ಇಲ್ಲವೆ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇದೊಂದೇ ಕೇಸಿನಲ್ಲಿ ಅಲ್ಲ. ನೂರಾರು ಜನ ಬಿ.ಜೆ.ಪಿ. ಕಾರ್ಯಕರ್ತರನ್ನು ಜೈಲಿಗೆ ಹಾಕುವ ಕೆಲಸ ಮಾಡಿದ್ದೀರಿ. ಸುಳ್ಳು ಕೇಸನ್ನು ಹಾಕುತ್ತಿದ್ದೀರಿ. ಒಂದು ರೀತಿಯಲ್ಲಿ ತುರ್ತು ಪರಿಸ್ಥಿತಿಯ ವಾತಾವರಣವನ್ನು ನಿರ್ಮಾಣ ಮಾಡುತ್ತಿದ್ದೀರಿ. ಬಿ.ಜೆ.ಪಿ. ಬೆಳೆಯುತ್ತಿದೆ ಎಂದು ಕಾನೂನು ಬಾಹಿರವಾಗಿ ಬಿ.ಜೆ.ಪಿ.ಕಾರ್ಯಕರ್ತರಮೇಲೆ ನೀವು ಕ್ರಮ ತೆಗೆದುಕೊಳ್ಳುತ್ತೀರಿ? ಇಂಥ ನೂರಾರು ಘಟನೆಗಳಿವೆ. ನಾವು ಸಮಾಧಾನದಿಂದ ಇದ್ದೇವೆ.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ : ವೋಟು ಕೊಡುವವರು ನಾವಲ್ಲ. ವೋಟು ಕೊಡುವ ಜನರಿದ್ದಾರೆ. ನೀವೇ ಬನ್ನಿ ನಿಮ್ಮನ್ನು ಯಾರು ಬೇಡವೆಂದು ಹೇಳುತ್ತಾರೆ.

(ಗೊಂದಲ)

ಶ್ರೀ ಆರ್. ಎಲ್.ಜಾಲಪ್ಪ : ತಮಗೆ ಎಲ್ಲಾ ಚೆನ್ನಾಗಿ ಗೊತ್ತಿದೆ. ಅವರು ಏನು ಬೇಕಾದರೂ ಮಾತನಾಡಬಹುದು. ಆದರೆ ಅದನ್ನು ಬೇರೆಯವರು ಎಷ್ಟರಮಟ್ಟಿಗೆ ಒಪ್ಪುತ್ತಾರೋ, ಬಿಡುತ್ತಾರೋ ಆ ವಿಷಯ ಬೇರೆ. ಅವರಿಗೆ ಮಾತನಾಡುವುದಕ್ಕೆ ಅಧಿಕಾರ ಇದೆ. ಯಾವ ಭಾಷೆಯನ್ನು ಬೇಕಾದರೂ ಅವರು ಉಪಯೋಗಿಸಬಹುದು. ಜನತಾ ದಳದ ಆಫೀಸಿನಲ್ಲಿ ನಾವು ಪೋಲಿಸ್ ಆಫೀಸನ್ನು ಓಪನ್ ಮಾಡಿದ್ದೇವಂತೆ, ಏಕೆ, ನಮಗೆ ಜಾಗ ಇಲ್ಲವೆ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ ಇದು ಶಾಂತಿಯನ್ನು ತರುವ ಬದಲು ಈ ಅಧಿಕಾರಿಯ ಆದೇಶ ಏನಿದೆ ಇದು ಕೋಮು ಗಲಭೆಗೆ ಪ್ರಚೋದನೆ ಮಾಡಿದಂತಾಗಿದೆ. ಯಾವ ಮುಸಲ್ಮಾನರೂ ಕೂಡ ನಮ್ಮನ್ನು ಇದರಲ್ಲಿ ಹಾಕಿ ಎಂದು ಕೇಳಿಕೊಂಡವರಲ್ಲ. ನಮ್ಮ ಮುಸ್ಲಿಮರನ್ನು ನೀವು ಜಾಮೀನು ಕೊಡಿ ಎಂದು ಯಾರೂ ಕೇಳಿಕೊಂಡಿಲ್ಲ. ಆದರೆ ಈ ವಿಭಾಗಾಧಿಕಾರಿ ಮಾಡಿರತಕ್ಕ ಆದೇಶ ಏನಿದೆ, ಇದನ್ನು ನಾವು ಪೂರ್ವಗ್ರಹಪೀಡಿತರಾಗದೆ ಪ್ರಾಮಾಣಿಕವಾಗಿ ಚಿಂತನೆ ಮಾಡಿದಾಗ ಇದು ಬಹಳ ಅಕ್ಷಮ್ಯ ಅಪರಾಧವಾದ ಆದೇಶವಾಗಿದೆ. ಇದು ಕರ್ನಾಟಕ ರಾಜ್ಯದಲ್ಲಿ ಎಲ್ಲೂ ಇಲ್ಲ. ಇದು ಬಿ.ಜೆ.ಪಿ. ಯವರ ಚಳುವಳಿ, ಇದು ಕಾಂಗ್ರೆಸ್‌ನವರ ಚಳುವಳಿ ಎಂದು ಏನೂ ಇಲ್ಲ. ಇಡೀ ರಾಜ್ಯದಲ್ಲಿ ಯಾರೇ ಒಬ್ಬ ಅಧಿಕಾರಿಯಾಗಲಿ ತಾನು ಯಾವುದೇ ಒಂದು ಆದೇಶವನ್ನು ಹೊರಡಿಸುವಾಗ ಈ ರೀತಿಯಾಗಿ ಹೊರಡಿಸಿದರೆ ಅದು ನಿಜವಾಗಿಯೂ ಒಂದು ರೀತಿಯ ಕೋಮು ಪ್ರಚೋದನೆಗೆ ಅವಕಾಶ ಅದೇ ಆಗುತ್ತದೆ. ಈ ಆದೇಶ ಏನಿದೆ ಇದನ್ನು ಸರ್ಕಾರ ವಾಪಸ್ಸು ತೆಗೆದುಕೊಂಡು ಸಂಬಂಧಪಟ್ಟ ಅಧಿಕಾರಿಯ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಮತ್ತು ಅಲ್ಲಿ ಶಾಂತಿ ನೆಲೆಸಲು ಏನು

ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಈಗಲೇ ತೆಗೆದುಕೊಳ್ಳಬೇಕು. ಅದಕ್ಕು ಬಿಟ್ಟು ಇದಕ್ಕೆ ಉತ್ತರವನ್ನು ನಾಳೆ ಕೊಡುತ್ತೇವೆ, ನಾಡಿದ್ದು ಕೊಡುತ್ತೇವೆಂದು ಹೇಳತಕ್ಕದ್ದು ಸರಿಯಾದ ಮಾರ್ಗವಿಲ್ಲ. ಮಾನ್ಯ ಸಂಸದೀಯ ಸಚಿವರಿಗೆ ಮಾನ್ಯ ಗೃಹ ಸಚಿವರಿಗೆ ಎಲ್ಲ ವಿಚಾರಗಳೂ ಗೊತ್ತಿದೆ. ಆದ್ದರಿಂದ ತಕ್ಷಣವೇ ಅವರ ಉತ್ತರವನ್ನು ಕೊಡಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರು : ಅಲ್ಲಿ ಏನು ನಡೆದಿದೆ ಎಂಬುದನ್ನು ವಿಚಾರಿಸಿ ಅದಕ್ಕೆ ಸಂಪೂರ್ಣವಾದ ಒಂದು ವರದಿಯನ್ನು ಕೊಡುತ್ತೇನೆಂದು ಮಾನ್ಯ ಮಂತ್ರಿಗಳು ಹೇಳಿದಮೇಲೂ ಕೂಡ ಬಿ.ಜೆ.ಪಿ.ಯವರು.....

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಖರ್ಗೆಯವರೆ, ತಾವು ಆ ಆದೇಶವನ್ನು ನೋಡಿದ್ದೀರೋ?

ಶ್ರೀ ಬಸವರಾಜ ಪಾಟೀಲ್ ಅಟ್ಟೂರು : ನಾವು ಇದರ ಬಗ್ಗೆ ನಿಖರವಾದ ಹೇಳಿಕೆಯನ್ನು ಕೊಡುತ್ತೇವೆಂದು ಹೇಳಿದಮೇಲೂ ಕೂಡ ಈ ರೀತಿ ಮಾನ್ಯ ಸದಸ್ಯರನ್ನು ಸತ್ಯಾಗ್ರಹ ಮಾಡುತ್ತೇವೆ ಎಂದು ಹೇಳತಕ್ಕದ್ದು ಸರಿಯಾದ ಕ್ರಮ ಅಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರ ಮೂಲಕ ಮಾನ್ಯ ಗೃಹ ಸಚಿವರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಯಾರೇ ತಪ್ಪು ಮಾಡಿರಲಿ, ಯಾವುದೇ ಪಕ್ಷಕ್ಕೆ ಸೇರಿದವರಿರಲಿ, ಎಷ್ಟೇ ದೊಡ್ಡ ಸ್ಥಾನದಲ್ಲಿರುವ ವ್ಯಕ್ತಿಯಾಗಲಿ ಅವರ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳಿ. ಅದಕ್ಕೆ ನಮ್ಮದೇನೂ ಅಡ್ಡಿ ಇಲ್ಲ. ನಾನು ಪ್ರಸ್ತಾಪ ಮಾಡುತ್ತಿರುವ ಒಂದೇ ಒಂದು ಸಂಗತಿ ಎಂದರೆ, ಈ ಅಸಿಸ್ಟೆಂಟ್ ಕಮಿಷನರರವರು ಈ ರೀತಿ ಕಾನೂನು ಬಾಹಿರವಾದ ಷರತ್ತುಗಳನ್ನು ಹಾಕಿ ಶಾಂತಿ ಸಭೆಗೆ ಕಳುಹಿಸಿದಂಥ ವ್ಯಕ್ತಿಗಳನ್ನು ಜೈಲಿಗೆ ಕಳುಹಿಸಿದ್ದಾರೆ.

ಇದು ಈ ದೇಶದ ಇತಿಹಾಸದಲ್ಲಿ ಈ ರೀತಿಯ ಒಂದು ಜನಾಂಗದ ಶ್ಯೂರಿಟಿಯನ್ನು ತೆಗೆದುಕೊಂಡು ಬನ್ನಿ ಎಂದು ಲಿಖಿತಮೂಲಕ ಆದೇಶವನ್ನು ಮಾಡಿರುವುದನ್ನು ನಾವು ಎಲ್ಲೂ ಕೂಡ ಕಂಡಿಲ್ಲ. ಈ ರೀತಿ ಯಾವುದೇ ಜಾತಿಯ ವ್ಯಕ್ತಿಯನ್ನು ಅಂದರೆ ಅದು ಮುಸ್ಲಿಂ ಇರಬಹುದು, ಕ್ರಿಶ್ಚಿಯನ್ ಇರಬಹುದು, ಹಿಂದೂ ಇರಬಹುದು, ಒಂದು ಜಾತಿಯ ವ್ಯಕ್ತಿ ಇನ್ನೊಂದು ಜಾತಿಯ ವ್ಯಕ್ತಿಯ ಜಾಮೀನನ್ನು ತರಬೇಕೆಂದು ಹೇಳುವಂಥ ಅಧಿಕಾರ ಯಾರಿಗೂ ಇಲ್ಲವೆಂದು ಸುಪ್ರೀಂ ಕೋರ್ಟಿನ ಸ್ಪಷ್ಟ ಆದೇಶ ಇದೆ. ಕಾನೂನಿನ ಪ್ರಕಾರ ಒಂದು ವರ್ಷದ ಮೇಲೆ ಬಾಂಡನ್ನು ಕೇಳುವಂತಿಲ್ಲವೆಂದು ಹೇಳಿದ್ದಾರೆ. ಅಂದರೆ ಇದು ಒಂದು ರೀತಿಯ ದುರುದ್ದೇಶದಿಂದ ಒಳ ಸಂಚು ನಡೆದಿದೆ. ನಮ್ಮ ಕಾರ್ಯಕರ್ತರನ್ನು ಜೈಲಿನಲ್ಲಿ ಇಡುವಂಥ ಒಂದು ವಾತಾವರಣ ಇದೆ. ಅವರು ಉಪವಾಸ ಸತ್ಯಾಗ್ರಹ ಮಾಡಿದರು, ಮಾನ್ಯ ಗೃಹ ಸಚಿವರು ಹೇಳಿದಂತೆ ಇವತ್ತು ಅವರು ಅಲ್ಲಿ ಆಸ್ಪತ್ರೆಗೆ ಅಡ್ಮಿಟ್ ಆಗಿದ್ದಾರೆ. ಈ ರೀತಿಯ ಮಾನಸಿಕ ಹಿಂಸೆಯನ್ನು ಅವರು ಅನುಭವಿಸುತ್ತಿದ್ದಾರೆ.

ಇದು ನಿಮ್ಮ ಸರ್ಕಾರಕ್ಕೆ ಗೌರವನ್ನು ತರುವಂಥಾದ್ದಲ್ಲ. ರಾಜ್ಯದಲ್ಲಿ ಇಂಥ ಅನೇಕ ಘಟನೆಗಳು ನಡೆದಿವೆ. ಬಿ.ಜೆ.ಪಿ. ಕಾರ್ಯಕರ್ತರಮೇಲೆ ಆ ರೀತಿಯ ಸುಳ್ಳು ಮೊಕದ್ದಮೆಗಳನ್ನು ಹೂಡುತ್ತಿರುವ ಕೆಲಸ ನಡೆಯುತ್ತಿದೆ. ಪೋಲಿಸ್ ಅಧಿಕಾರಿಗಳನ್ನು ಭೇಟಿಮಾಡಿದಾಗ ಈ ರೀತಿ ಆದೇಶ ಬಂದಿದೆ ಎನ್ನುತ್ತಾರೆ. ನಾವು ಈ ಬಗ್ಗೆ ಏನೂ ಮಾಡುವುದಕ್ಕೆ ಆಗುವುದಿಲ್ಲ ಎನ್ನುವಂಥ ಒಂದು ಅಸಹಾಯಕತೆ ಅವರಲ್ಲಿ ತಲೆದೋರಿದೆ. ಇಂಥ ಒಂದು ನಿರ್ದಿಷ್ಟ ಉದಾಹರಣೆಯನ್ನು ಕೊಟ್ಟಾಗ, ಎಲ್ಲ ಜನರನ್ನೂ ಒಂದೇರೀತಿಯಾಗಿ ನೋಡುವಂಥ ಅಧಿಕಾರ ಸ್ಥಾನದಲ್ಲಿರುವ ನೀವು ಪಕ್ಷ ಭೇಧವನ್ನು ಮರೆತು ಕಾನೂನಿನ ಚೌಕಟ್ಟಿನಲ್ಲಿ ಕೆಲಸಮಾಡುವಂಥ ಒಂದು ಆದೇಶವನ್ನು ಹೊರಡಿಸಬೇಕು, ಆದರಂತೆ ಅಧಿಕಾರಿಗಳು ನಡೆದುಕೊಳ್ಳಬೇಕಾಗುತ್ತದೆ. ಈ ಸರ್ಕಾರ ಇವತ್ತು ಇರುತ್ತದೆ, ನಾಳೆ ಹೋಗುತ್ತದೆ. ಆದರೆ ಈ ರೀತಿಯ ಒಂದು ಆದೇಶ ಇದ್ದರೆ ಮುಂದೆ ಎಲ್ಲ ಮ್ಯಾಜಿಸ್ಟ್ರೇಟರಗಳೂ ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿ ಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ನಿರ್ದಿಷ್ಟ ಆದೇಶವೊಂದನ್ನು ತಮ್ಮ ಮುಂದಿಟ್ಟಾಗ ಅದು ಏನೆಂದು ತಾವು ಮನದಟ್ಟುಮಾಡಿಕೊಳ್ಳಬೇಕು. ನಾನು ತಮಗೆ ನಿನ್ನೆ ಹೇಳಿದ್ದೇನೆ, ಐಪಿಸಿ ಕೋಡ್ ಏನು ಹೇಳುತ್ತದೆ, ಸುಪ್ರೀಂ ಕೋರ್ಟ ಏನು ಹೇಳುತ್ತದೆ, ಎಂಬುದನ್ನು ಶ್ರೀಮತಿ ಪ್ರಮೀಳಾರವರು ವಿಶ್ಲೇಷಣೆ ಮಾಡಿರುವುದರಿಂದ ಮತ್ತೆ ನಾನು ಅದನ್ನು ವಿಶ್ಲೇಷಣೆ ಮಾಡುವ ಅವಶ್ಯಕತೆ ಇಲ್ಲ. ಅದು ಸರಿ ಎನ್ನುವುದಾದರೆ ಈ ಕಾನೂನು ಪ್ರಕಾರ ಕ್ರಮವನ್ನು ನಾವು ತೆಗೆದುಕೊಂಡಿದ್ದೇವೆ ಎಂದು ಹೇಳುವುದಾದರೆ, ನಾವು ನಮ್ಮ ಸ್ಥಾನಕ್ಕೆ ಬಂದು ಕುಳಿತುಕೊಳ್ಳುತ್ತೇವೆ. ಇದು ತಪ್ಪು, ಇದು ಸರಿಯಲ್ಲ ಎಂದು ಕಂಡುಬಂದಾಗ ಆ ಸಂಬಂಧಪಟ್ಟ ಅಧಿಕಾರಿಯನ್ನು ಅಮಾನತ್ತಿನಲ್ಲಿಟ್ಟು ಏನಕ್ಕೈರಿ ಮಾಡಿಸುತ್ತೇವೆಂದು ಹೇಳುವುದಕ್ಕೆ ಮಾನ್ಯ ಜಾಲಪ್ಪನವರಿಗಾಗಲೀ, ಮಾನ್ಯ ಗೃಹ ಸಚಿವರಿಗಾಗಲೀ, ಮಾನ್ಯ ಕಾನೂನು ಸಚಿವರಿಗಾಗಲಿ ಏನು ತೊಂದರೆ ಇದೆ ಎಂಬುದನ್ನು ನಮಗೆ ಅರ್ಥವಾಗುತ್ತಿಲ್ಲ.

(ಶ್ರೀ ರಮೇಶ್ ಕುಮಾರ್‌ರವರು ಅಧ್ಯಕ್ಷ ಪೀಠಕ್ಕೆ ಬಂದರು.)

ಶ್ರೀ ಎಂ.ಪಿ. ಪ್ರಕಾಶ್ : ಇಲ್ಲಿ ಪ್ರಶ್ನೆ ಬಂದಿರತಕ್ಕದ್ದು ಏನೆಂದರೆ, ಒಬ್ಬ ಸಹಾಯಕ ಆಯುಕ್ತರಾಗಿ ತನ್ನ ಕಾರ್ಯನಿರ್ವಾಹಕ ಅಧಿಕಾರವನ್ನು ಚಲಾಯಿಸಿದ. ಇಲ್ಲಿ ಆತ ಒಬ್ಬ ಮ್ಯಾಜಿಸ್ಟ್ರೇಟ್ ಆಗಿ ಒಂದು ಆಜ್ಞೆಯನ್ನು ಪಾಸ್ ಮಾಡಿದ್ದಾನೆ. ಈ ಆಜ್ಞೆ ಕ್ವಾಸಿ ಜ್ಯುಡಿಸಿಯಲ್ ನೇಚರದು ಆಗಿರುತ್ತದೆ, ಅಥವಾ ಒಬ್ಬ ಮ್ಯಾಜಿಸ್ಟ್ರೇಟ್ ಆಗಿ ಮಾಡಿರತಕ್ಕ ಆಜ್ಞೆ ಮಾನ್ಯ ಪ್ರಮೀಳಾರವರಿಗೂ ಗೊತ್ತಿರುವಂಥ ವಿಚಾರ ಇದು. ಇದರ ಬಗ್ಗೆ ಮೇಲ್ಮನವಿಯನ್ನು ಸಲ್ಲಿಸಬೇಕಾದ ಕಾರ್ಯ ಕಾನೂನು ಪದ್ಧತಿಯಲ್ಲಿ ಆಗಬೇಕಾಗುತ್ತದೆ. ಮೇಲ್ನೋಟದಲ್ಲೇ ಇಂಥ ಕಾನೂನಿಗೆ ಅನುಗುಣವಾದುದಲ್ಲದೆ ಆಜ್ಞೆ ಎಂಬುದು ಕಂಡು ಬಂದರೆ ತಕ್ಷಣವೇ ಅದು ತಿರಸ್ಕಾರಕ್ಕೆ ಒಳಪಡುತ್ತದೆ. ಮಾನ್ಯ ಕಾನೂನು ಮಂತ್ರಿಗಳಾಗಿ ಕೆಲಸಮಾಡಿದ ಮಾನ್ಯ ರಾಮಕೃಷ್ಣರವರಿಗೂ ಕೂಡ ಈ ವಿಚಾರ ಗೊತ್ತಿದೆ ಈ ಹಿನ್ನೆಲೆಯಲ್ಲಿ ನೋಡಿದರೆ ಇಲ್ಲಿ ಸರ್ಕಾರ ಮಾಡಬೇಕಾದ ಕೆಲಸ ಎಂದರೆ ಸ್ವಲ್ಪಮಟ್ಟಿಗೆ ಮಾತ್ರ ಇದೆ. ಈಗ ಅವರು ಪ್ರಸ್ತಾಪಿಸಿರುವ ವಿಷಯ ಹೇಗಿದೆ ಎಂದರೆ, ಒಬ್ಬ ಅಧಿಕಾರಿ ಸರ್ಕಾರದ ಭಾವನೆಯಲ್ಲಿ ಒಬ್ಬ ಹಿಂದುವಾಗಿರುವವನು

ಮುಸಲ್ಮಾನರ ಜಾಮೀನನ್ನು ತೆಗೆದುಕೊಂಡು ಬರಬೇಕು ಎನ್ನುವ ರೀತಿಯಲ್ಲಿ ಆಜ್ಞೆ ಮಾಡಿದ್ದಾನೆ ಎಂದು ಇದಕ್ಕೆ ಒಂದು ಹೊಸ ಆಯಾಸವನ್ನು ತೊಡಿಸವ ಪ್ರಯತ್ನವನ್ನು ಮಾನ್ಯ ವಿರೋದ ಪಕ್ಷದ ನಾಯಕರೂ ಮತ್ತು.....

(ಗೊಂದಲ)

ಶ್ರೀ ಎಂ. ಪಿ. ಪ್ರಕಾಶ್ : ಇಲ್ಲಿ ಚರ್ಚೆಗನುಗುಣವಾದ ರೀತಿಯಲ್ಲಿ ಮಾತನಾಡಬೇಕಾಗುತ್ತದೆಯೇ ವಿನಹ ಕೂಗಾಡುವುದರ ಮೂಲಕ ಗಂಟಲನ್ನು ಹರಿದುಕೊಂಡು ಯಾರು ಸಿಟ್ಟಿಗೆ ಏಳುತ್ತಾರೆಂದರೆ...

ಅಧ್ಯಕ್ಷರು : ವೆಲ್‌ನಲ್ಲಿ ನಿಂತು ಯಾರು ಹೇಳಿದರೂ ರೆಕಾರ್ಡಗೆ ಹೋಗುವುದಿಲ್ಲ.

ಶ್ರೀ ಎಂ. ಪಿ. ಪ್ರಕಾಶ್ : ಸಾಮಾನ್ಯವಾಗಿ ಯಾರಿಗೆ ಬಲವಾದ ಕಾರಣಗಳು ಇರುವುದಿಲ್ಲ ಅಂಥವರು ಸಿಟ್ಟಿಗೇಳುತ್ತಾರೆ. ಇಲ್ಲಿ ನಾನು ಮಾತನಾಡುವುದು ತಮಗೆ ಸಹಮತ ಇಲ್ಲದೇ ಹೋಗಬಹುದು ಆದರೆ ಇದನ್ನು ಯಾವರೀತಿಯಲ್ಲಿ ಚರ್ಚೆಮಾಡಬೇಕೆಂಬುದನ್ನೂ ಕೂಡ ತಿಳಿದುಕೊಳ್ಳದಿದ್ದರೆ ಹೇಗೆ? ಜವಾಬ್ದಾರಿ ಸ್ಥಾನದಲ್ಲಿರುವವರು ಘರ್ಜಿಸುವುದರ ಮೂಲಕ ಜನರನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ನನ್ನ ಮಾತನ್ನು ತಾವು ಒಪ್ಪದೇ ಹೋಗಬಹುದು. ಆ ಮಾತು ಬೇರೆ. ಆದರೆ ಇಲ್ಲಿ ಒಬ್ಬ ಮ್ಯಾಜಿಸ್ಟ್ರೇಟ್ ಆಗಿ ಮಾಡಿರುವಂಥ ಆಜ್ಞೆ ಅದು ಎಷ್ಟೇ ಕಾನೂನು ಬಾಹಿರವಾಗಿರುವಂಥದ್ದಾಗಿದ್ದರೂ ಕೂಡ ಸರ್ಕಾರ ನೇರವಾಗಿ ತನ್ನ ಹಸ್ತಕ್ಷೇಪವನ್ನು ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ರೀತಿ ಕಾನೂನುಬಾಹಿರವಾದ ಆಜ್ಞೆಯನ್ನು ಮಾಡಿದವನನ್ನು ಹಿಡಿದುಕೊಂಡು ರಸ್ತೆಯಲ್ಲಿ ಹೊಡೆಯಿರಿ ಎಂದು ಹೇಳಬೇಕಗುತ್ತದೆ..... ಭ್ರಷ್ಟ ಅಧಿಕಾರಿಗಳನ್ನು ರಸ್ತೆಯಲ್ಲಿ ಹೊಡೆಯಿರಿ ಎಂದು ನೀವೇ ಹೇಳಿದ್ದೀರಿ.....

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದನ್ನು ಏನಾದರೂ ಮಾಡಿ ಬಗೆಹರಿಸದಿದ್ದರೆ ನಾವು ಹೇಗೆ ಕೂಡುವವರು, ಕೂಡಬೇಕಾಗುತ್ತದೆ, ಏನಾದರೂ ಮಾಡಿ ಇದನ್ನು ಬಗೆಹರಿಸಬೇಕು. ಹೊಡೆಸುತ್ತೇನೆ ಎನ್ನುವುದು, ಹೊಡಿಸಿಕೊಳ್ಳುವುದು, ಒಲ್ಲೆ ಎನ್ನುವುದು, ಅದಕ್ಕೆ ತಾಪತ್ರಯ ನಮಗೆ ಆಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕಾಂಗ್ರೆಸ್ಸಿನವರು ಕರೆಕೊಟ್ಟಿದ್ದಾರೆ. ಈಗ ನಾವು ಏನು ಮಾಡಬೇಕು ಹೇಳಿ.

ಶ್ರೀ ಆರ್.ಎಲ್. ಜಾಲಪ್ಪ : ಯಾರು ಕಾನೂನು ಎಕ್ಸರ್‌ಸೈಸ್ ಮಾಡುತ್ತಾರೆ ಅವರೆಲ್ಲರನ್ನು ಸಸ್ಪೆಂಡ್ ಮಾಡುತ್ತೇನೆಂದು ಹೇಳಿದ್ದನ್ನು ನಾನು ಎಲ್ಲಿಯೂ ಹೇಳಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವೇ ಆದೇಶ ಕೊಟ್ಟು ಕಾನೂನು ಬಾಹಿರವಾಗಿ ಮಾಡಿಸಿದಾಗ ಏನು ಮಾಡಬೇಕು?

ಶ್ರೀ ಆರ್.ಎಲ್. ಜಾಲಪ್ಪ : ಕಾನೂನು ಪ್ರಕಾರ ಅವನಿಗೆ ಇರುವ ಪವರ್ ಎಕ್ಸರಸೈಸ್ ಮಾಡಿದರೆ, ಪವರ ಎಕ್ಸರ್‌ಸೈಸ್ ಮಾಡಿರುವುದು ಜಾಸ್ತಿ ಇರಬಹುದು. ಕಡಿಮೆ ಮಾಡಿದ್ದಾನೆ ಜಾಸ್ತಿ ಮಾಡಿದ್ದಾನೆಂದು ಹೇಳುವುದಕ್ಕೆ ನನಗೆ ಗೊತ್ತಿಲ್ಲ. ಅವನು ಪವರ್ಸ್ ಎಕ್ಸ್‌ರ್‌ಸೈಸ್ ಮಾಡುವಾಗ ಜಾಸ್ತಿ ಮಾಡಿರಬಹುದು. ಕಡಿಮೆ ಮಾಡಿದ್ದಾನೆ ಜಾಸ್ತಿ ಮಾಡಿದ್ದಾನೆಂದು ಹೇಳುವುದಕ್ಕೆ ನನಗೆ ಗೊತ್ತಿಲ್ಲ. ಅವನು ಪವರ ಎಕ್ಸರಸೈಸ್ ಮಾಡುವಾಗ ಜಾಸ್ತಿ ಮಾಡಿರಬಹುದು. ಅದಕ್ಕೆ ಬೇಕಾದರೆ ಅಪೀಲ್ ಹೋಗಬಹುದು. ಅದು ಬಿಟ್ಟು ನಾನು ಇವರನ್ನು ಕಂಟ್ರೋಲ್ ಮಾಡುತ್ತಾ ಕುಳಿತರೆ ನಡೆಯುತ್ತದೆಯೆ? ಆಡಳಿತ ನಡೆಸುವುದಕ್ಕೆ ಆಗುತ್ತದೆಯೆ?

ಶ್ರೀ ಎಂ. ಪಿ. ಪ್ರಕಾಶ್ : ಶ್ರೀಮತಿ ಪ್ರಮೀಳಾರವರು ವಕಾಲತ್ತು ಮಾಡುವಾಗ ಯಾವ ರೀತಿ ಅವರು ಆರ್ಗ್ಯುಮೆಂಟ್ ಮಾಡುತ್ತಾರೆಂದು ಗೊತ್ತಿದೆ. ಕಾನೂನು ಬದ್ಧವಾಗಿ ಆರ್ಗ್ಯುಮೆಂಟ್ ಮಾಡುತ್ತಾರೆ. ಇಲ್ಲಿ ಯಾವುದೋ ಕಾರಣಗಳಿಗಾಗಿ ಅಥವಾ ಅನ್ಯ ಕಾರಣಗಳಿಗಾಗಿ ಮಾಡಿದರೆ ನಮ್ಮದೇನು ಆಕ್ಷೇಪಣೆ ಇಲ್ಲ. ಆದರೆ ಒಬ್ಬ ಮ್ಯಾಜಿಸ್ಟ್ರೇಟರಾಗಿ ಮಾಡಿರತಕ್ಕ ತೀರ್ಮಾನ ಸರ್ಕಾರದ ನಿಲವು ಅಲ್ಲ. ಸರ್ಕಾರ ಇದನ್ನು ಖಂಡಿತವಾಗಿ.....

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಉದ್ದೇಶಪೂರ್ವಕವಾಗಿ....

(ಗೊಂದಲ)

ಶ್ರೀ ಎಂ. ಪಿ. ಪ್ರಕಾಶ್ : ಮಾತನಾಡುವುದಕ್ಕೆ ನಿಮ್ಮದೇ ಗುತ್ತಿಗೆ ಅಲ್ಲ. ನಾವು ಮಾತನಾಡುವುದಕ್ಕೆ ಅವಕಾಶ ಕೊಡಿ. ನೀವು ನನ್ನ ಮಾತನ್ನು ಒಪ್ಪದೆ ಹೋಗಬಹುದು. ಪ್ರತಿ ಸಂದರ್ಭದಲ್ಲಿ ಈ ರೀತಿ ಪ್ರವೇಶ ಮಾಡುವುದಾದರೆ ಏನು ಪ್ರಯೋಜನವಾಗುತ್ತದೆ? ನನ್ನ ಮಾತನ್ನು ನೀವು ಒಪ್ಪದೆ ಹೋಗಬಹುದು, ಆ ಮಾತು ಬೇರೆ

(ಮಾನ್ಯ ಸದಸ್ಯರಾದ ಪ್ರಮೀಳ ನೇಸರ್ಗಿಯವರು ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು.)

ಶ್ರೀ ಎಂ. ಪಿ. ಪ್ರಕಾಶ್ : ನೀವು ಯಾವ ಕ್ರಮ ಕೈಗೊಳ್ಳಬೇಕು ಎನ್ನುವುದಕ್ಕೆ ನೀವು ಸರ್ವ ಸ್ವತಂತ್ರರು. ನೀವೇನಾದರೂ ಮಾಡಿ. ಆದರೆ ನಮ್ಮ ಮಾತನ್ನೂ ಸ್ವಲ್ಪ ಆಲಿಸಿ. ಏತಕ್ಕೆ ಹೀಗೆ ಮಾಡುತ್ತೀರಿ?

MR. SPEAKER : Some how it has been my observation and inference that non-advocates dis-play better parliamentary skills in the House. Mr. Shivappa, please go back to your seat. Thats why, I, said non-advocates display a better skill. Let us adhere to certain basic principles. When I keep quiet, not that I am enjoying it. It is a kind of silent protest. Please do not take the House for granted. We have a set of procedures to conduct the proceedings. Yes, please let me hear you.

ಶ್ರೀ ಎಂ. ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಈ ಸಂಸದೀಯ ವ್ಯವಹಾರಗಳಲ್ಲಿ ನಾನು ಯಾವುದೋ ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ ಎಂದಲ್ಲ. ಕೊಡುವಂಥ ತೆಗೆದುಕೊಳ್ಳುವಂಥ, ಮಾತುಗಳನ್ನು ಮೊನಚಿನ್ನು ಹಾಕುವಂಥಾದ್ದು ಇದು ಒಂದು ನಡೆದು ಬಂದಿರತಕ್ಕ ಸತಸಂಪ್ರದಾಯ. ಯಾರಾದರೂ ತಮ್ಮ ತಮ್ಮ ವಿಚಾರಗಳನ್ನು ಪ್ರತಿಪಾದಿಸುತ್ತಾ ಇದ್ದರೆ ಅದಕ್ಕೆ ನಾವು ಪ್ರತಿಭಟನೆ ಮಾಡುತ್ತೇನೆ ಎಂದಾಗ ತಮಗೆ ಅವಕಾಶ ಸಿಕ್ಕಿದಾಗ ಪ್ರತಿಭಟನೆ ಮಾಡಿ. ಕೂಗುವುದರ ಮೂಲಕ ಮಾಡುವುದಲ್ಲ. ಯಾರಿಗೆ ಬಲವಾದಂಥ ಕಾರಣಗಳಿರುವುದಿಲ್ಲ ಅವರು ಹೆಚ್ಚು ಕೋಪಕ್ಕೆ ಒಳಗಾಗುತ್ತಾರೆ. ಮತ್ತು ತೀವ್ರವಾದಂಥ ಗಲಾಟೆ ಮಾಡುವಂಥ ಪ್ರಯತ್ನವನ್ನು ಮಾಡುತ್ತಾರೆ. ಅದನ್ನು ದಯಮಾಡಿ ಅವರು ಮಾಡಿದ್ದರೆ ಅಥವಾ ನಾವು ಮಾಡಿದ್ದರೆ, ಯಾರು ಮಾಡಿದ್ದರೂ ಅದು ತಪ್ಪೆ. ಆ ಕಾರಣಕ್ಕಾಗಿ ಇವತ್ತು ಅಧ್ಯಕ್ಷರು ಮನನೊಂದು ಇಂಥ ಮಾತನ್ನು ಹೇಳಿದ್ದಾರೆ. ಈಗ ವಕೀಲರುಗಳು ಕೂಡ ಸರಿಯಾದಂಥ ಸಂಸದೀಯ ಪಟು ಏತಕ್ಕೆ ಆಗಿಲ್ಲ ಅಂದರೆ ಅವರು ಎಲ್ಲವನ್ನೂ ತಿಳಿದಂಥವರು ಎನ್ನುವಂಥ ಭಾವನೆಯನ್ನಿಟ್ಟುಕೊಂಡಿರುವುದರಿಂದ ನಮ್ಮ ವಕಾಲತ್ತಿನ ಬಗ್ಗೆ ಗೌರವ ಮತ್ತು ಘನತೆ ಯಾವರೀತಿ ಆಗಿದೆ ಎಂಬುದು ಕೂಡ ತಮಗೆ ಗೊತ್ತಿದೆ. ಆದರೆ ಇಲ್ಲಿ ನಾನು ಪ್ರಸ್ತಾಪಿಸಿರತಕ್ಕ ವಿಷಯ ಒಬ್ಬ ಮ್ಯಾಜಿಸ್ಟ್ರೇಟ್ ಆಗಿ ಆತ ಆಜ್ಞೆಯನ್ನು ಮಾಡಿದ್ದಾನೆ. ಆ ಆಜ್ಞೆ ಅನೇಕಸಾರಿ ಕಾನೂನುಬಾಹಿರವಾಗಿರತಕ್ಕಂಥ ಆಜ್ಞೆ ಎಂದು ಮೇಲ್ನೋಟಕ್ಕೆ ಕೂಡ ಕಾಣಬಹುದು. ಆದರೆ ಆ ಆಜ್ಞೆಗೆ ಮೇಲ್ಮನವಿ ಇರತಕ್ಕದ್ದು ಮಾತ್ರ ಒಂದು ಉಪಾಯವೇ ವಿನಹ ಸರ್ಕಾರ ನೇರವಾಗಿ ಹಸ್ತಕ್ಷೇಪ ಮಾಡುವುದಕ್ಕಾಗುವುದಿಲ್ಲ. ಆದರೆ ಅಂಥ ಅವೈಜ್ಞಾನಿಕವಾದಂಥ ಕಾನೂನುಬಾಹಿರವಾಗಿರತಕ್ಕಂಥ ಆಜ್ಞೆಯನ್ನು ತಿಳಿವಳಿಕೆ ಇಲ್ಲದೆ ಮಾಡುವಂಥ ಅಧಿಕಾರಿಗಳನ್ನು ಸರ್ಕಾರ ಗಮನದಲ್ಲಿಟ್ಟು ನೋಡುತ್ತಿದೆ. ಆತನ ಈ ರೀತಿಯಾಗಿರತಕ್ಕಂಥ ಅನೇಕ ಕ್ರಮಗಳ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತದೆ. ಈಗ ಮಾನ್ಯ ಗೃಹಸಚಿವರು ನೇರವಾಗಿ ಸದನದಲ್ಲಿ ಈ ತಕ್ಷಣದಲ್ಲೇ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಎಂದು ಹೇಳುವುದಕ್ಕಾಗುವುದಿಲ್ಲ. ಮತ್ತೆ ಎರಡನೆಯದು, ಇದಕ್ಕೆ ಒಂದು ಹೊಸ ಆಯಾಮವನ್ನು ಬೆರೆಸತಕ್ಕದ್ದು, ಸರ್ಕಾರದಲ್ಲಿ ಇಂಥ ಅಧಿಕಾರಿಗೆ ಬೆಂಬಲವನ್ನು ಕೊಡುತ್ತೀರಿ, ಹಿಂದೂಗಳಾಗಿರತಕ್ಕವರ ಮೇಲೆ ಮುಸಲ್ಮಾನರನ್ನು ಕರೆದುಕೊಂಡು ಬನ್ನಿ ಅಂತ ಹೇಳುವುದು, ಮುಸಲ್ಮಾನರು ತಪ್ಪು ಮಾಡಿದರೆ ಹಿಂದೂಗಳನ್ನು ಕರೆದುಕೊಂಡು ಬನ್ನಿ ಜಾಮೀನು ಕೊಡುವುದಕ್ಕೆ ಎನ್ನುವುದನ್ನು ನೀವು ಸರ್ಕಾರದವರು ಒಪ್ಪುತ್ತೀರಾ ಎನ್ನುವಂಥ ರೀತಿಯಲ್ಲಿ ಭಾವೋದ್ರೇಕಕ್ಕೆ ಒಳಪಡುವಂಥ, ಸರ್ಕಾರವೇ ಏನೋ ತಪ್ಪು ಮಾಡಿದೆ ಎನ್ನುವ ರೀತಿಯಲ್ಲಿ ಆರೋಪಣೆ ಇದೆ. ಇದು ನಿರಾಧಾರವಾಗಿರತಕ್ಕ ಆರೋಪ. ಇದರಲ್ಲಿ ನೇರವಾಗಿ ಯಾವುದೂ ಇಲ್ಲ ಎಂದು ಗೃಹ ಸಚಿವರು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ದಯಮಾಡಿ ಅವರಲ್ಲಿ ನಾನು ಭಿನ್ನಹ ಮಾಡಿಕೊಳ್ಳತಕ್ಕಂಥದ್ದು ಈ ವಿಚಾರದಲ್ಲಿ ಮೇಲ್ಮನವಿಯನ್ನು ಅವರು ಸಲ್ಲಿಸಲಿ. ಗೃಹಸಚಿವರು ಈಗಾಗಲೇ ಅದನ್ನು ಪ್ರಸ್ತಾಪ ಮಾಡಿದ್ದಾರೆ. ಇದನ್ನು ದೀರ್ಘವಾಗಿ ತೆಗದುಕೊಂಡು ಹೋಗುವುದು ನಮ್ಮ ಸರ್ಕಾರದ ನಿಲುವು ಕೂಡ ಅಲ್ಲ.

MR. SPEAKER : Mr. Shivappa, you had a feeling that you are not getting a chance to participate in the proceedings. Let me hear what you want to say.

ಶ್ರೀ ಹೆಚ್. ಶಿವಪ್ಪ : ನಮ್ಮ ಗ್ರಾಮೀಣ ಮಂತ್ರಿಗಳು ಹೇಳಿದ್ದನ್ನೇ ನಾನು ಪ್ರತಿಪಾದಿಸುತ್ತಾ ನಿನ್ನೆಯೇ ಹೇಳಿದೆ, ಇದು ಸಬ್-ಡಿವಿಷನ್ ಮ್ಯಾಜಿಸ್ಟ್ರೇಟ್‌ರವರ ಆದೇಶ. ಇದಕ್ಕೆ ಅಪೀಲ್ ಇದೆ, ಅಪಲೆಟ್ ಕೋರ್ಟ್ ಇದೆ. ಇಲ್ಲಿ ಸರ್ಕಾರ ನೇರವಾಗಿ ಮ್ಯಾಜಿಸ್ಟ್ರೇಟ್ ಪಾಸ್ ಮಾಡಿರತಕ್ಕ ಆರ್ಡರನ್ನು ವಿತಡ್ರಾ ಮಾಡಿಕೊಳ್ಳುವುದಕ್ಕೆ ಯಾವ ಕಾನೂನಿನಲ್ಲೂ ಅವಕಾಶ ಇಲ್ಲ. ಅವರು ತಪ್ಪು ಮಾಡಿರಬಹುದು. ಅದಕ್ಕೋಸ್ಕರವೇ ಅಪಲೆಟ್ ಕೋರ್ಟ್ ಇರತಕ್ಕಂಥದ್ದು. ಸುಪ್ರೀಂ ಕೋರ್ಟ್ ಒಂದು ಬಿಟ್ಟರೆ ಕೆಳಮಟ್ಟದಿಂದ ನಾವು ಅಪೀಲ್ ಹೋಗುವುದಕ್ಕೆ ಅವಕಾಶ ಇದ್ದಾಗ ಇಲ್ಲಿ ಸರ್ಕಾರ ಏನು ಮಾಡಬಲ್ಲದು? ಸರ್ಕಾರ ಆರ್ಡರನ್ನು ವಿತಡ್ರಾ ಮಾಡಬಹುದಾ? ಅವನು ತಪ್ಪೇ ಮಾಡಿರಬಹುದು. It is an appealable order. The aggrieved person should have filed on appeal and sought redressal. ನೋವಾಗಿರಬಹುದು. ಇಲ್ಲಿ ದಯವಿಟ್ಟು ಸರ್ಕಾರ ಹಸ್ತಕ್ಷೇಪ ಮಾಡುವುದಕ್ಕಾಗುವುದಿಲ್ಲ. ಅವರ ಆದೇಶವನ್ನು ವಿತಡ್ರಾ ಮಾಡಿಕೊಳ್ಳವುದಕ್ಕಾಗುವುದಿಲ್ಲ. ಅದು ಸಬ್-ಜ್ಯುಡೀಸ್ ಆಗುತ್ತದೆ. We cannot also interfere in the dispensation of justice. We are not here sitting in judgment over an order of the Sub-Divisional Magistrate. There is an appellate authority. They should have preferred an appeal. ನಮ್ಮ ಪ್ರಮೀಳಾ ನೇಸರ್ಗಿಯವರು ಹೆಸರಾಂತ ವಕೀಲರು. ಈಗಾಗಲೇ ಇಂಥದ್ದೇ ಒಂದು ಕೇಸಬಗ್ಗೆ ಕೋರ್ಟ ಆರ್ಡರ್ ಮಾಡಿದ್ದಾರಂತೆ. ಆ ಆದೇಶದಂತೆ ಇವರು ತಪ್ಪು ಮಾಡಿದ್ದಾರೆ ಅಂತ ಅಪೀಲನ್ನು ಫೈಲ್ ಮಾಡಿ...

MR. SEPARKER : Are you basing your argument on the strength decided matter, any of any/case law?

SRI H. SHIVAPPA : She has quoted. It is common sense knowledge.

MR. SPEAKER : Alright, I have heard you. Let me hear Madam Pramila.

ಶ್ರೀಮತಿ ಎಸ್. ಪ್ರಮೀಳಾನೇಸರ್ಗಿ : ಸನ್ಮಾನ್ಯ ಸಭಾಧ್ಯಕ್ಷರೆ, ಇಲ್ಲಿ ಮೂಲಭೂತವಾಗಿರತಕ್ಕ ಪ್ರಶ್ನೆ ಕಾನೂನಿಗೆ ವಿರುದ್ಧವಾಗಿ ಅಪೀಲ್ ಹೋಗಿ ಎಂದು ಏನು ಸನ್ಮಾನ್ಯ ಎಂ.ಪಿ. ಪ್ರಕಾಶ್ ಅವರು ಹೇಳಿದರು ಅಥವಾ ಬೇರೆಯವರು ಹೇಳಿದರು ಅದಲ್ಲ ಪ್ರಶ್ನೆ. ಇಲ್ಲಿ ತಮ್ಮ ಮುಂದೆ ಇರತಕ್ಕ ಪ್ರಶ್ನೆ ಬಿಟ್ಟು ಅಧಿಕಾರಿ 110ನೇ ಸೆಕ್ಷನ್ ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿ ಅಧಿಕಾರವನ್ನು ಉಪಯೋಗಿಸಿಕೊಂಡಿರುವವರಿಗೆ1973ನೇ ಇಸವಿ ಕ್ರಿಮಿನಲ್ ಪ್ರೊಸೀಜರ್ ಕೋಡ್ ಅಮೆಂಡ್‌ಮೆಂಟ್ ಆದಮೇಲೆ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟಿಗೆ ಮಾತ್ರ ಆ ಅಧಿಕಾರ ಚಲಾಯಿಸುವುದಕ್ಕೆ ಅಧಿಕಾರ ಇರತಕ್ಕಂಥ ಸಂದರ್ಭದಲ್ಲಿ ಯಾವ ಅಧಿಕಾರಿಗೆ ಅಧಿಕಾರ ಇಲ್ಲವೋ ಆ ಅಧಿಕಾರಿಯ ಮುಂದೆ ಪೋಲೀಸಿನವರು ಪೀಸ್ ಕಮಿಟಿಗೆ ಯಾರನ್ನೋ ಕರೆದು, ಚಾಮರಾಜನಗರದಲ್ಲಿ ಪುರಸಭೆಗೆ

ಚುನಾಯಿತರಾಗಿರತಕ್ಕ ಚುನಾಯಿತ ಪ್ರತಿನಿಧಿಗಳನ್ನು ಶಾಂತಿಸಮಿತಿಗೆ ಕರೆದು, ಶಾಂತಿ ಸಮಿತಿಗೆ ಬಂದಾಗ ಅವರನ್ನು ಅರೆಸ್ಟ ಮಾಡಿ ಯಾವ ಅಧಿಕಾರಿ ಮುಂದೆ ಅಧಿಕಾರ ಇಲ್ಲವೋ ಅವರ ಮುಂದೆ ಅಪರಾಧಿ ಸ್ಥಾನದಲ್ಲಿ.....

ಅಧ್ಯಕ್ಷರು : ಮೇಡಂ, ದಯಮಾಡಿ ನನಗೆ I want your guidance but not those details. Sub Divisional Magistrate has now passed an order. Can this House sit on judgment over the order passed by a Sub Divisional Magistrate in his capacity as a judicial authority? That is all what I want. Can we do it or not. It is in that connection. Let us not go into the merits of the case.

ಶ್ರೀಮತಿ ಎಸ್. ಪ್ರಮೀಳಾ ನೇಸರ್ಗಿ : ನಾನು ಅದಕ್ಕೇ ಹೇಳಿದೆ. ಕೋರ್ಟಿನಲ್ಲಿ Legality of the order ಬೇರೆ. ಅದು ಕಾನೂನುಬದ್ಧವಾಗಿ ಆರ್ಡರ್ ಮಾಡಿದ್ದಾನೋ ಇಲ್ಲವೋ ಎನ್ನತಕ್ಕಂಥದ್ದು ಕೋರ್ಟಿನಲ್ಲಿ ಹೋಗಿ ನಾವು ಪ್ರಶ್ನೆ ಮಾಡತಕ್ಕಂಥದ್ದು. ಆದರೆ ಇಲ್ಲ ಮೂಲಭೂತವಾಗಿರತಕ್ಕಂಥ ಪ್ರಶ್ನೆ ಒಬ್ಬ ಅಧಿಕಾರಿ ತನ್ನ ಅಧಿಕಾರವನ್ನು ಚಲಾವಣೆ ಮಾಡತಕ್ಕಂಥ ಸಂದರ್ಭದಲ್ಲಿ....

ಅಧ್ಯಕ್ಷರು : ಇಲ್ಲಿ ಪ್ರಶ್ನೆ ಇರುವುದು ಅಸಿಸ್ಟೆಂಟ್ ಕಮಿಷನರ್ ಆಗಿ ಯಾವುದೇ ಒಂದು ಜಮೀನು ಕೊಡುವುದೋ ಮನೆ ಕೊಡುವುದೋ ಅಥವಾ ಇನ್ಯಾವುದಾದರೂ ಒಂದು ವಿಚಾರದಲ್ಲಿ ತಪ್ಪು ಮಾಡಿದರೆ ಸಿವಿಲ್ ಸರ್ವೆಂಟ್ ಆಗಿ ಆತ ತಪ್ಪು ಮಾಡತಕ್ಕ ಸಂದರ್ಭದಲ್ಲಿ ಸರ್ಕಾರ ಅಧಿಕಾರ ನಡೆಸತಕ್ಕಂಥದ್ದು ಒಂದು ಅಂಶ. ಆತ ಸಬ್-ಡಿವಿಷನಲ ಮ್ಯಾಜಿಸ್ಟ್ರೇಟ್ ಆಗಿ ತನ್ನ ಜ್ಯುಡಿಷಿಯಲ್ ಪವರ್ಸನ್ನು ಚಲಾವಣೆ ಮಾಡತಕ್ಕಂಥ ಸಂದರ್ಭದಲ್ಲಿ ಯಾವುದಾದರೂ ತಪ್ಪನ್ನು ಎಸಗಿದ್ದರೆ ಅಪೀಲ್ ಇರುತ್ತೆ, ಅಪೀಲನಲ್ಲಿ ಏನಾಗುತ್ತೋ ಆಪ್ರಶ್ನೆ ಬೇರೆ. ಅದರ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇರುತ್ತದಾ ಎಂಬ ಬಗ್ಗೆ ಗೈಡ್ ಮಾಡಿ ಎಂದು ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆ.

ಶ್ರೀಮತಿ ಎಸ್. ಪ್ರಮೀಳಾ ನೇಸರ್ಗಿ : ಆ ಪ್ರಶ್ನೆಗೇ ಬರುತ್ತಿದ್ದೇನೆ.

MR. SPEAKER : I even request Mr. Y. Ramakrishna to go back to his seat for this purpose and come to my rescue, if you can throw some light. I am requesting some of the eldest to come to my resecue,

ಶ್ರೀಮತಿ ಎಸ್. ಪ್ರಮೀಳಾ ನೇಸರ್ಗಿ : ಸನ್ಮಾನ್ಯ ಸಭಾಪತಿಯವರೇ, ನಾನು ಇದರ ಬಗ್ಗೆಯೇ ಹೇಳುತ್ತೇನೆ. ತಾವು ಹೇಳಿರತಕ್ಕದ್ದನ್ನು ಗಮನದಲ್ಲಿಟ್ಟುಕೊಂಡು ಹೇಳುತ್ತೇನೆ. ಮಾನ್ಯ ಸಭಾಧ್ಯಕ್ಷರೇ, ಎರಡು ಪ್ರಶ್ನೆ ತಮ್ಮ ಮುಂದೆ ಇರತಕ್ಕದ್ದು. ಒಂದು legality of the order which can be challenged in the court of law. ಅದರ ಬಗ್ಗೆ ನಾನು ತಮ್ಮ ಮುಂದೆ ಹೇಳುತ್ತಾ ಇಲ್ಲ. Legality of the order is different. ಅದು ಕಾನೂನುಬದ್ಧವಾಗಿಯೇ ಅಥವಾ ಇಲ್ಲವೇ ಅದಲ್ಲ ಪ್ರಶ್ನೆ ನಮಗೆ ಮೂಲಭೂತವಾಗಿರತಕ್ಕದ್ದು. ಕೋಮು ಪ್ರಚೋದನೆ ಮಾಡತಕ್ಕ ಆರ್ಡರನ್ನು

ಯಾವುದಾದರೂ ಅಧಿಕಾರಿ ಈ ಸರ್ಕಾರದಲ್ಲಿ ಮಾಡಬಹುದೇ ? ಆ ಸೀಮಿತವಾದ ಪ್ರಶ್ನೆಯನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಈ ಆರ್ಡರ್‌ನ್ನು ಮಾಡಿ, ಈ ರೀತಿ ಕಂಡೀಷನ್ ಹಾಕಿ ಇಂಥದ್ದೇ ಕೋಮಿಗೆ ಸಂಬಂಧಪಟ್ಟವರು ಜಾಮೀನನ್ನು ಕೊಡಬೇಕು ಎಂದು ಏನು ಆದೇಶವನ್ನು ಬರೆದಿದ್ದಾರೆ ಇದು ಯಾವ ಕಾನೂನಿನಲ್ಲೂ ಕೂಡ ಇಲ್ಲ. beyond the jurisdiction. Jurisdiction is one thing, beyond the jurisdiction is another thing, erroneous exercise of jurisdiction is another thing. ಇಲ್ಲಿ erroneous exercise of jurisdiction ಅಲ್ಲ, ಇಲ್ಲಿ want of jurisdiction ಅವನಿಗೆ ಮೂಲಭೂತವಾಗಿ ಹಕ್ಕೇ ಇಲ್ಲ ಎಂಬ ಪ್ರಶ್ನೆಯನ್ನು ತಮ್ಮ ಮುಂದೆ ನಾನು ಇಡುತ್ತಾ ಇದ್ದೇನೆ. erroneous jurisdictionಅಥವಾ ಕಾನೂನಿಗೆ ವಿರುದ್ಧವಾಗಿ ಮಾಡಿದ್ದಾರೆ ಅಂತ ಅಂದಾಗ ಹೈಕೋರ್ಟಿಗೆ ಹೋಗಿ ನಾವು ವಿಚಾರ ಮಾಡತಕ್ಕ ವಿಷಯ ಬೇರೆ. ಇಲ್ಲಿ want of jurisdiction ಇರತಕ್ಕದ್ದು.

MR. SPEAKER : My problem, is the august House competent to discuss or debate a matter which has come in the form of a judgment by a judicial authority? That is all what I want. Let me be convinced today, it is going to remain as a precedent. I don't want to act in haste. I am not in a hurry.

ಶ್ರೀಮತಿ ಎಸ್. ಪ್ರಮೀಳಾ ನೇಸರ್ಗಿ : ಉದಾಹರಣೆಗೆ ಹೇಳುತ್ತೇನೆ ಸಭಾಧ್ಯಕ್ಷರೆ, ನಾಳೆ ಒಬ್ಬ ಸಬ್-ಡಿವಿಷನ್ ಆಫೀಸರ್ ತನಗೆ ಅಧಿಕಾರ ಇದೆ ಅಂತ ಹೇಳಿ ಈ ವಿಧಾನಸೌಧವನ್ನು ಯಾರಿಗೋ ಸೇರಿದ್ದು ಎಂದು ಆರ್ಡರ್‌ನ್ನು under see. 145 ಎಂದು ಬರೆಯುತ್ತಾನೆ ಅಂತ ಇಟ್ಟುಕೊಳ್ಳಿ. ಆಗ ತಾವು ಹೇಳುತ್ತೀರಾ ಕೋರ್ಟಿಗೆ ಹೋಗಿ ವಿಚಾರಣೆ ಮಾಡೋಣ, ಕೋರ್ಟಿನಲ್ಲಿ ತೀರ್ಮಾನ ತೆಗೆದುಕೊಳ್ಳೋಣ ``It is an order made by the Magistrate under Section 145" ಅಲ್ಲಿ ಹೋಗಿ ತೀರ್ಮಾನ ತೆಗೆದುಕೊಳ್ಳೋಣ ಅಂತ ಹೇಳುತ್ತೀರೋ ಅಥವಾ ಆ ಅಧಿಕಾರಿಗೆ ಮೂಲಭೂತವಾಗಿ ಹಕ್ಕೇ ಇಲ್ಲ, ಈ ವಿಷಯಕ್ಕೆ ಬರುವಂಥ ಹಕ್ಕೇ ಇಲ್ಲ, ಅವನು ಮಾಡಿರತಕ್ಕ ಆರ್ಡರ್ ತಪ್ಪು ಅಂತ ಹೇಳಿ ಅಧಿಕಾರದಲ್ಲಿರುವವರು ತಕ್ಷಣ ಅವನನ್ನು ಸಸ್ಪೆನಷನನಲ್ಲಿಟ್ಟು ಎನಕ್ವೈರಿ ಮಾಡಬೇಕಾಗಿತ್ತು.

1.00 ಪಿ.ಎಂ.

ಈ ವಿಷಯವನ್ನು ಯೋಚನೆ ಮಾಡಬೇಕಾಗಿದೆ. ಮೂಲಭೂತವಾಗಿರತಕ್ಕದ್ದು want of Jurisdiction ಕೋಮು ಪ್ರಚೋದನೆ ಮಾಡತಕ್ಕ ಆರ್ಡರ್, ಯಾವನೇ ಅಧಿಕಾರಿ ಎಲ್ಲೇ ಇರಲಿ. ಮಾಡಿದ್ದರೆ....

MR. SEPAKER : To help you to come back to the point, I am very conscious of guarding the rights and privileges of this House. I have also taken a very serious view the other day while commenting that the Courts

also cannot transgress their limits. When I say it is applicable to it as well. I want to tell very clearly without any ambiguity, are we are well within our limits in discussing the judgment of a judicial authority? That is all the point.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳುತ್ತಿದ್ದೇನೆಂದರೆ, ಒಬ್ಬ ತಹಶೀಲ್ದಾರ್ ತಾಲ್ಲೂಕು ಮ್ಯಾಜಿಸ್ಟ್ರೇಟ್ ಆಗಿ, ಒಬ್ಬ ಅಸ್ಸಿಟೆಂಟ್ ಕಮೀಷನರ್ ಮ್ಯಾಜಿಸ್ಟ್ರೇಟರ ಸ್ಥಾನದಲ್ಲಿ ಕುಳಿತುಕೊಂಡು ತನ್ನ ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡಬೇಕೆಂದು ನಾವು ನಿರೀಕ್ಷೆ ಮಾಡುತ್ತೇವೆ. ಈ ತಹಶೀಲ್ದಾರ್ ಈ ಅಸಿಸ್ಟೆಂಟ್ ಕಮೀಷನರ್ ಸರ್ಕಾರದಿಂದ ನಿಯುಕ್ತಿಯಾಗುವಂತಹ, ಅವರ ಮುಲಾಜಿನಲ್ಲಿ ಇತ್ತೀಚೆಗೆ ಸಿಕ್ಕಿ ಬೀಳುವಂತಹ ಅಧಿಕಾರಿಗಳು. ಈ ಅಧಿಕಾರಿ ಉದ್ದೇಶಪೂರ್ವಕವಾಗಿ ಆಡಳಿತ ಪಕ್ಷದ ಮುಖಂಡರ ಚಿತಾವಣೆಯಿಂದ ಭಾರತೀಯ ಜನತಾಪಾರ್ಟಿಯ ಚುನಾಯಿತ ಪ್ರತಿನಿಧಿಗಳು ಕಾನೂನು ಬಾಹಿರವಾಗಿ ಬಂಧನಮಾಡಿ ಶಾಂತಿಸಭೆಗೆ ಬಂದವರನ್ನು ಆ ಕಾನೂನು ಚೌಕಟ್ಟನ್ನು ಮೀರಿ ದೇಶದ ಇತಿಹಾಸದಲ್ಲಿ ಹಿಂದೆಂದೂ ಕಂಡರಿಯದಂತಹ ಒಂದು ಆರ್ಡರನ್ನು ಅವರು ಮಾಡಿದ್ದಾರೆ. ಅದು ಏನೆಂದರೆ 15 ವರ್ಷ ಅಲ್ಲೆ ವಾಸ ಮಾಡಿರುವಂತಹ ಇಬ್ಬರು ಮುಸ್ಲೀಮ್ ಮುಖಂಡರ ಜಾಮೀನನ್ನು ಪಡೆಯಬೇಕೆನ್ನುವಂತಹದ್ದು. ಇದು ಜಾತಿಯ ವಿಷಬೀಜ ಬಿತ್ತುವಂತಹ ಪ್ರಯತ್ನ ಇದು ಒಂದಾಗಿದೆ. ಎರಡನೆಯದು ಭಾರತೀಯ ಜನತಾ ಪಾರ್ಟಿಯ ಚುನಾಯಿತ ಪ್ರತಿನಿಧಿಗಳಿಗೆ ಅಪಮಾನ ಮಾಡುವಂತಹದ್ದು. ಕಾನೂನು ಬಾಹಿರವಾಗಿ ಅವರು ಜೈಲಿನಲ್ಲಿ ಕೊಳೆಯುವಂತೆ ಮಾಡುವಂತಹದ್ದು. ಕೇವಲ ಇದೊಂದು ಘಟನೆಯಲ್ಲ ರಾಜ್ಯದ ಉದ್ದಗಲಕ್ಕೆ ಕಳೆದ 8-10 ತಿಂಗಳಲ್ಲಿ ನೂರಾರು ಸುಳ್ಳು ಕೇಸಗಳನ್ನು ಭಾರತೀಯ ಜನತಾ ಪಾರ್ಟಿಯ ಶಾಸಕರುಗಳ ಮೇಲೆ, ಕಾರ್ಯಕರ್ತರ ಮೇಲೆ ಕೇಸುಗಳನ್ನು ಹಾಕಿರತಕ್ಕ ಉದಾಹರಣೆಗಳಿವೆ. ನಾವು ಇಲ್ಲಿ ಪ್ರಸ್ತಾಪ ಮಾಡಲಿಲ್ಲ. ಒಂದೂ ಪ್ರಸ್ತಾಪ ಮಾಡಲಿಲ್ಲ. ಕೋರ್ಟ ಇದೆ ನಮಗೆ ವಿಶ್ವಾಸವಿದೆ ಅಲ್ಲಿ ನಾವು ನ್ಯಾಯವನ್ನು ತೆಗೆದುಕೊಳ್ಳುತ್ತೇವೆ. ಆದರೆ ಇಲ್ಲಿ ಒಬ್ಬ ಅಸಿಸ್ಟೆಂಟ್ ಕಮೀಷನರ್ ಪ್ರಭಾವಿ ವ್ಯಕ್ತಿಗಳ ಸಚಿವರ ಚಿತಾವಣೆಯಿಂದ ನಿಮ್ಮ ಮುಖಂಡರ ಚಿತಾವಣೆಯಿಂದ ಭಾರತೀಯ ಜನತಾ ಪಾರ್ಟಿಯ ಕಾರ್ಯಕರ್ತರನ್ನು ಹತ್ತಿಕ್ಕಬೇಕೆನ್ನುವ ಉದ್ದೇಶದಿಂದ ಕಾನೂನು ಬಾಹಿರವಾಗಿ ಈ ಕೆಲಸವನ್ನು ಮಾಡಿಸಿದ್ದಾರೆ. ಅದಕ್ಕೆ ರಕ್ಷಣೆಯನ್ನು ಈ ಸರ್ಕಾರ ಕೊಡುತ್ತಿದೆ. ಅದಕ್ಕಾಗಿ ಇವತ್ತು ನಾನು ಕೊಟ್ಟಿರುವ ದಾಖಲೆಯ ಪ್ರಕಾರ ಮೇಲ್ನೋಟಕ್ಕೆ ಇದು ಯಾವುದೇ ಕಾನೂನಿನಲ್ಲಿ ಇಲ್ಲವೆನ್ನುವುದು ನಿಮಗೆ ಸ್ಪಷ್ಟವಾಗಿರುವಂತಹ ಕಾಲದಲ್ಲಿ ಆ ಮನುಷ್ಯನನ್ನು ಸಸ್ಪೆನ್‌ಷನ್‌ನಲ್ಲಿಡಬೇಕು ಇದು ಒಂದು ಭಾಗ. ಮಾನ್ಯ ಜಾಲಪ್ಪನವರು ಹಿರಿಯ ಸಚಿವರು ಇದ್ದಾರೆ. ಅವರು ಒಂದು ಕರೆಯನ್ನು ಕೊಟ್ಟರು. ರಾಜ್ಯದ ಉದ್ದಗಲಕ್ಕೆ, ಅವರು ಏನು ಹೇಳಿದರು ಅಂದರೆ ತಪ್ಪು ಮಾಡಿದಂತಹ ಅಧಿಕಾರಿಗಳನ್ನು ಭ್ರಷ್ಟ ಅಧಿಕಾರಿಗಳನ್ನು ಸಿಕ್ಕಿದಲ್ಲಿ ಹಿಡಿದುಕೊಂಡು ಬಡಿಯಿರಿ ಎಂದು ಹೇಳಿದರು. ಎಲ್ಲಿದೆ ಸ್ವಾಮಿ ಅದು ಕಾನೂನಿನಲ್ಲಿ? ನಾನು ಹೇಳುತ್ತೇನೆ, ಇವತ್ತು ಭ್ರಷ್ಟ ಅಧಿಕಾರಿಗಳನ್ನು ಬಡಿಯಿರಿಯೆಂದು ಹೇಳಿದ್ದೀರಿ,

ನಿಮ್ಮ ಆಡಳಿತ ಪಕ್ಷದ ಕೈಚೀಲಗಳಾಗಿ ಕಾನೂನು ಬಾಹಿರವಾಗಿ ಕೆಲಸ ಮಾಡತಕ್ಕ ಅಧಿಕಾರಿಗಳಿಗೆ ಹೊಡೆಯಿರಿಯೆಂದು ನಾನು ಹೇಳಿದರೆ ನಾನು ಅಪರಾಧ ಮಾಡಿದಂತಾಗುತ್ತದೆ. ನಾನು ಆ ಕೆಲಸ ಮಾಡುವುದಿಲ್ಲ. ಆದರೆ ನೀವು ಅದನ್ನು ಹೇಳಿದ್ದೀರಿ. ಭ್ರಷ್ಟ ಅಧಿಕಾರಿಗಳನ್ನು ಹಿಡಿದುಕೊಂಡು ಹೊಡೆಯುವುದಕ್ಕೂ ಅವಕಾಶವಿಲ್ಲ, ಭ್ರಷ್ಟ ಅಧಿಕಾರಿಗಳ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ನೀವು ಅಧಿಕಾರದಲ್ಲಿರುವುದು. ಸಾರಾಸಗಟಾಗಿ ಎಲ್ಲಾ ಅಧಿಕಾರಿಗಳು ಭ್ರಷ್ಟರಿದ್ದಾರೆಂದು ನಾನು ಹೇಳುವುದಕ್ಕೆ ತಯಾರಾಗಿಲ್ಲ. ಅವರನ್ನು ಭ್ರಷ್ಟರು ಮಾಡತಕ್ಕದ್ದು ಈ ವ್ಯವಸ್ಥೆ. ಅವರಿಗೆ ಚಿತಾವಣೆ ಮಾಡುತ್ತಿರುವವರು ನೀವು. ನಿಮ್ಮವರ್ಗಾವಣೆಯ ಕಪಿಮುಷ್ಟಿಯಲ್ಲಿ ಹಿಡಿದುಕೊಂಡು ಒಂದು ರೀತಿಯಲ್ಲಿ ಸೇಡು ತೀರಿಸಿಕೊಳ್ಳುವುದಕ್ಕೋಸ್ಕರ ಈ ಕೆಲಸ ಮಾಡುತ್ತೀದ್ದೀರಿ. ಇದು ಕಾನೂನು ಪ್ರಶ್ನೆಯಲ್ಲ. ಈ ಪ್ರಶ್ನೆ ನಿಮ್ಮ ಚಿತಾವಣೆಯಿಂದ ಆ ಅಸಿಸ್ಟೆಂಟ್ ಕಮೀಷನರ್ ಈ ಕಾನೂನು ಬಾಹಿರವಾದ ಕ್ರಮವನ್ನು ತೆಗೆದುಕೊಂಡಿದ್ದಾನೆ. ಅವನನ್ನು ಸಸ್ಪೆನಷನನಲ್ಲಿಡಬೇಕು. ಇದು ನಮ್ಮ ಒತ್ತಾಯ ಇದು ರಾಜಕೀಯ ಪ್ರಶ್ನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ಅಸಿಸ್ಟೆಂಟ್ ಕಮೀಷನರರವರು ಮೂರು ಪಾತ್ರ ವಹಿಸುತ್ತಾರೆ. ಒಂದು ಸಿಆರಪಿಸಿ, ಐಪಿಸಿ ಮತ್ತು ಪೋಲೀಸ್ ಆಕ್ಟ್ ಕೆಳಗೆ ಸಬ್ ಡಿವಿಜನ ಮ್ಯಾಜಿಸ್ಟ್ರೇಟ್ ಎಂದು ಕೆಲಸಮಾಡತಕ್ಕದ್ದು ಒಂದು. ಎರಡನೆಯದು ಲ್ಯಾಂಡ್ ರೆವಿನ್ಯೂ ಆಕ್ಟ ಪ್ರಕಾರ ಹೆಚ್ಚು ಕಡಿಮೆ ಸಿವಿಲ್ ಲಿಟಿಗೇಷನ್ಸನ್ನು ಸೆಟಲ್ ಮಾಡುವುದು ಅಂದರೆ Mutation ಆಗಲಿ, ಅಪೀಲ್ ಆಗಲಿ ಇವೆಲ್ಲ ನೋಡಿಕೊಳ್ಳತಕ್ಕದ್ದು ಒಂದು. ಮೂರನೆಯದು, ಅಡ್ಮಿನಿಸ್ಟ್ರೇಷನ್ ಲಾ ಅಂಡ್ ಆರ್ಡರ್ ಇದನ್ನು ಕೂಡ ಅವರು ನೋಡಿಕೊಳ್ಳಬೇಕು. ಈ ಮೂರು ತನ್ನ ಕರ್ತವ್ಯವನ್ನು ನಿಭಾಯಿಸುವಾಗ, ನಾವು ಬರೀ ಒಂದೇ ದೃಷ್ಟಿಯಿಂದ ನೋಡಿದರೆ ಅವನು ಸಬ್ ಡಿವಿಜನ್ ಮ್ಯಾಜಿಸ್ಟ್ರೇಟ್ ಆಗಿ ಈ ಆರ್ಡರ್ ಪಾಸ್ ಮಾಡಿದ್ದಾನೆ, ಅದಕ್ಕೆ ಸೀಮಿತವಾಗಿ ಚರ್ಚೆ ಮಾಡಬೇಕೆಂದರೆ ನ್ಯಾಚುರಲ್ even erroneous order ಪಾಸ್ ಮಾಡಿದ್ದರೂ ಕೂಡ ಅಥವಾ ಅವನಿಗೆ ಅಧಿಕಾರವಿಲ್ಲದೆ ಯಾವುದೋ ಒಂದು ಆರ್ಡರ್ ಪಾಸ್ ಮಾಡಿದ್ದರೂ ಕೂಡ ಅದನ್ನು ಸೆಟ ಸೈಡ ಮಾಡುವುದಕ್ಕೆ ನೆಕಸ್ಟ ಅಪೀಲಗೆ ಹೋಗಬೇಕು. ಅದಕ್ಕೆ ಬೇರೆ ದಾರಿಯಿಲ್ಲ. ಆದರೆ ಒಬ್ಬ ಅಸಿಸ್ಟೆಂಟ್ ಕಮೀಷನರ್ ಆಗಿ ಒಬ್ಬ ಆಡಳಿತಾಧಿಕಾರಿಯಾಗಿ, ಅವನ ಜವಾಬ್ದಾರಿ ಏನೆಂದರೆ ಪೀಸ್ ಕಮಿಟಿ ಅಂತ ಹೇಳಿ ಕರೆದಾಗ ಅಲ್ಲಿ ಯಾವರೀತಿಯಾಗಿ ವರ್ತನೆ ಮಾಡಬೇಕು ಮತ್ತು ಎಂಥ ಅಧಿಕಾರಿಗಳನ್ನು ನೀವು ಸಬ್ ಡಿವಿಜನಗೆ ಹಾಕಬೇಕೆನ್ನತಕ್ಕದ್ದು ಅದನ್ನು ನೋಡಿಕೊಳ್ಳತಕ್ಕ ಜವಾಬ್ದಾರಿ ನಿಮ್ಮಮೇಲೆ ಇದೆ. ಆ ಅಧಿಕಾರಿ ಒಳ್ಳೆಯವನೋ ಕೆಟ್ಟವನೋ ಅವನಿಂದ ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೋ ಇಲ್ಲವೊ, ಅಥವಾ ಕಾನೂನನ್ನು ಪರಿಪಾಲನೆ ಮಾಡುತ್ತಾನೋ ಅಥವಾ ಇಲ್ಲವೊ, ಎನ್ನತಕ್ಕದ್ದನ್ನು ನೀವು ತಿಳಿದುಕೊಳ್ಳದೇ ಹೋದರೆ, ನೀವು ಎಂತಹವನೋ ಒಬ್ಬ ಅಧಿಕಾರಿಯನ್ನು ಹಾಕುವುದು ಅವನು ಇಂತಹ ಸಮಸ್ಯೆಗಳನ್ನು ಸೃಷ್ಟಿ ಮಾಡುವುದು ಆ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿ ಅದನ್ನು ಸಾಲ್ವ ಮಾಡುವುದಕ್ಕೆ ನಾವು ಇಲ್ಲಿ ವಿಧಾನಸೌಧದಲ್ಲಿ ದಿನಗಟ್ಟಲೆ ಗಂಟೆಗಟ್ಟಲೆ ಕಾಲವನ್ನು ಕಳೆಯುವುದು.

ಅದಕ್ಕಾಗಿ ಬೇಸಿಕಲಿ ತಮ್ಮ ತಪ್ಪು ಏನಿದೆ ಅಂದರೆ ಅಂತಹ ಅಧಿಕಾರಿಗಳನ್ನು ಅಲ್ಲಿಗೆ ಹಾಕಿರುವುದು ಆಗಿದೆ ಅವರೇ ಇಂತಹ ಸಮಸ್ಯೆಗಳನ್ನು ಕ್ರಿಯೇಟ್ ಮಾಡುತ್ತಾರೆ. ಅದಕ್ಕಾಗಿ ನನ್ನ ಅನಿಸಿಕೆ ಇಷ್ಟೆ, ಆ ಅಧಿಕಾರಿ ತಪ್ಪೋ ಒಪ್ಪೋ ಏನು ನಿರ್ಣಯ ಕೊಟ್ಟಿದ್ದಾನೆ ಅದಂತು ಖಂಡಿತವಾಗಿ, ಯಾರೂ ಹೇಳುವುದಿಲ್ಲ. ಎಲ್ಲೋ ಒಂದು ಅಟ್ರಾಸಿಟಿ ಕೇಸು ಆಗುತ್ತದೆ ಷಡ್ಡೂಲ್ಡ ಕಾಸ್ಟನವನಿಗೆ ತೆಗೆದುಕೊಂಡು ಬರುವುದಕ್ಕೆ ಆಗುತ್ತದೆಯೆ? ಸಮಸ್ಯೆ ಏನೇ ಇರಬಹುದು, ಆ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ನೀವು ಬೇರೆ ದಾರಿಯನ್ನು ಹುಡುಕಿ. ಆದರೆ ಯಾವುದೋ ರೀತಿಯಿಂದ ಒಬ್ಬರಿಗೊಬ್ಬರು ಸಿಕ್ಕಿಸಿಕೊಳ್ಳಬೇಕೆಂದು ಹೇಳಿ ಆಗದೇ ಇರುವುದನ್ನು ಮಾಡಿಯೆಂದು ಹೇಳಿ ಕಾನೂನಿನಲ್ಲಿ ತಂದು ಆರ್ಡರ್ ಮಾಡಿದ್ದೇವೆಂದು ಹೇಳಿದರೆ, ಇದರಿಂದ ಇನ್ನು ಹೆಚ್ಚು ಸಮಸ್ಯೆ ಉಲ್ಬಣವಾಗುತ್ತದೆ ಹೊರತಾಗಿ ಇದಕ್ಕೆ ಪರಿಹಾರ ಸಿಗುವುದಿಲ್ಲ. ದಯವಿಟ್ಟು ನನ್ನ ಅನಿಸಿಕೆ ಇಷ್ಟೆ. ಅಂತಹ ಅಧಿಕಾರಿಗಳನ್ನು ಅಲ್ಲಿ ಇಡಲೇಬಾರದು. ಇವತ್ತು ಈ ಸಮಸ್ಯೆಯನ್ನು ತಯಾರು ಮಾಡಿದ್ದಾನೆ, ನಾಳೆ ಇನೊಂದು ಸಮಸ್ಯೆಯನ್ನು ತಯಾರು ಮಾಡುತ್ತಾನೆ. ಅದಕ್ಕೆ ತಾವು ಅಪೀಲ್ ಹೋಗಿಯೆಂದು ಅದಕ್ಕೆ ಬೇರೆ ಪರಿಹಾರವೇ ಇಲ್ಲ. ಆದರೆ ಯಾವ ಅಧಿಕಾರಿ ತನ್ನ ಅಧಿಕಾರದಲ್ಲಿ ಅಧಿಕಾರವಿಲ್ಲ ಅದನ್ನು ಚಲಾಯಿಸಿಕೊಂಡು ಹೋಗತಕ್ಕದ್ದನ್ನು ನಡೆಸಿಕೊಂಡು ಹೋಗುತ್ತಿದ್ದಾನೆ ಅಂತಹ ಅಧಿಕಾರಿಗಳಿಗೆ ನೀವು ಅಲ್ಲಿ ಏಕೆ ಇಡುತ್ತೀರಿ? ದಯವಿಟ್ಟು ಅಂತಹ ಅಧಿಕಾರಿಗಳನ್ನು ತೆಗೆದುಹಾಕಿ, ಬೇರೆಯವರನ್ನು ಯಾರನ್ನಾದರೂ ನೇಮಿಸಿ, ಕೊನೆಯ ಪಕ್ಷ ಒಳ್ಳೆಯ ವ್ಯವಸ್ಥೆಯಾದರೂ ಬರುತ್ತದೆ.

ಶ್ರೀ ವೈ. ರಾಮಕೃಷ್ಣ : ಮಾನ್ಯ ಅಧ್ಯಕ್ಷರೆ, ಯಾವುದಾದರೂ ಆಧಾರದ ಮೇಲೆ ನಾವು ಮಾತನಾಡಬೇಕೆಂದರೆ ಹಿಂದೆಂದೂ ಆಗಿಲ್ಲ. ಪ್ರೋಸೀಡಿಂಗ್ಸ್ ಕೋಟ್ ಮಾಡಿ ಮಾತನಾಡಬೇಕೆಂದರೆ ಹಿಂದೆಂದೂ ಆಗಿಲ್ಲವಲ್ಲ ಇಂತಹದ್ದು. ಮುಂದೆನೂ ಅಂಟಿಸಿಪೇಟ್ ಮಾಡುವುದಕ್ಕಾಗುವುದಿಲ್ಲ. ಅಂತಹ ಹುಚ್ಚ ಅವನು. ಇದು ಸದನದ ಮುಂದೆ ಬರಬಾರದಾಗಿತ್ತು. ಅವನು ಅವನ ಜ್ಯುರಿಸಟ್ಷನ್ ಏನೂ ಬೇಕಾದರೂ ಮಾಡಿಕೊಂಡು ಹೋಗಲಿ. ಆ ಪದ ಇದೆಯಲ್ಲ ಆ ಟು ವರಡ್ಸ ಇದೆಯಲ್ಲ ಯಾವುದು ಇಂತಹವರೇ ಬಂದು ಇಷ್ಟು ವರ್ಷ ವಾಸವಾಗಿರತಕ್ಕ ಇಂತಹ ಜನಾಂಗದವರೇ ಬಂದು ಜಾಮೀನು ಕೊಟ್ಟರೆ ಇದು ಇದೆಯಲ್ಲ ಇದೇನಾಗುತ್ತದೆ? ಒಂದು ಜನಾಂಗವನ್ನು ಇನ್ನೊಂದು ಜನಾಂಗದ ಮೇಲೆ ಉದ್ರೇಕ ಮಾಡಿಸಿದಂತಾಗುತ್ತದೆ. ನಾನು ಸರ್ಕಾರಕ್ಕೆ ಆಗಲೇ ಮನವಿ ಮಾಡಿಕೊಂಡಿದ್ದೇನೆ. ಈಗ ಅಲ್ಲಿ ಗಲಭೆ ಪ್ರಾರಂಭವಾಗಿದೆ. ಚಾಮರಾಜನಗರದಲ್ಲಿ ಗಲಭೆ ಪ್ರಾರಂಭವಾಗಿದೆ. ಇದು ದೇಶಕ್ಕೆಲ್ಲ ಹರಡಿಕೊಳ್ಳಬೇಕೆಂದು ತಮ್ಮ ಆಸೆಯೇ? ಅಥವಾ ಇದನ್ನು ಅಲ್ಲೆ ನಿಲ್ಲಿಸಬೇಕೆಂದು ನಿಮ್ಮ ಆಸೆಯೇ? ಈಗ ತಮ್ಮ ಚಿತ್ತಕ್ಕೆ ಒಂದು ವಿಚಾರ ತರುವುದಕ್ಕೆ ಇಚ್ಛೆ ಪಡುತ್ತೇನೆ. ಜೈಲಿಗೆ ಹೋಗಿರತಕ್ಕ 7 ಜನರ ಪೈಕಿ ಒಬ್ಬರು ಸುಸ್ತಾಗಿ ಪ್ರಾಣ ಹೋಗುವಹಾಗೆ ಆಗಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದಾರೆ. ಅವರು ಮನುಷ್ಯರಲ್ಲವೇ? ಅವರಿಗೆ ಕೋಪ ತಾಪ, ಸುಖ ದುಃಖ ಏನೂ ಇರುವುದಿಲ್ಲವೇ? ಅವರಿಗೇನು ಹೆಂಡತಿ ಮಕ್ಕಳಿಲ್ಲವೇ? ಇನ್ನು ಆರು ಜನರು ಅದೇರೀತಿ ಆದರೂ ಎಂದು ಇಟ್ಟುಕೊಳ್ಳಿ ನಾಳೆ ಅಲ್ಲಿ ಶಾಂತಿಯಿರುತ್ತದೆಯೇ? ಶಾಂತಿಭಂಗವಾಗುತ್ತದೆ, ಇದಕ್ಕೆ

ಯಾರು ಕಾರಣಕರ್ತರು? ಹೌಸ್ ಅಲ್ಲ ಅದನ್ನು ಚರ್ಚೆಮಾಡುವುದಕ್ಕೆ ನಾವಿಲ್ಲಿ ಇದನ್ನು ತಂದಿದ್ದೇರೆ. we have to stop at a level. ಎಲ್ಲಿ ನಿಲ್ಲಿಸಬೇಕು ಅಲ್ಲಿ ತಕ್ಷಣ ನಿಲ್ಲಿಸಬೇಕು. ಮಾನ್ಯ ವಿರೋಧಪಕ್ಷದ ನಾಯಕರು ಬಹಳ ಸ್ಪಷ್ಟೀಕರಣ ಮಾಡಿ ನಿನ್ನೆ ಹೇಳಿದ್ದಾರೆ. ಇದನ್ನು ಸಾಯಂಕಾಲದೊಳಗಾಗಿ ತಿಳಿಸಿ ಅಂದಾಗ ನೀವು ನಾಳೆ ಹೇಳುತ್ತೇನೆಂದು ಹೇಳಿದಿರಿ. ನಿಮಗೆ ಟೈಮ್ ಕೊಟ್ಟರು 24 ಗಂಟೆಯಾಯಿತು, 28 ಗಂಟೆಯಾಯಿತು ಒಂದು ವೇಳೆ ಶಕ್ತಿ ಕೈಮೀರಿತು ಎಂದು ಇಟ್ಟುಕೊಳ್ಳಿ, ಆಗ ಸರ್ಕಾರ ಜವಾಬ್ದಾರಿಯಾಗುವುದಿಲ್ಲವೆ? ತಾವು ಲೀಗಲ್ ಆಸ್‌ಪೆಕ್ಟ್‌ನಲ್ಲಿ ಕೇಳಿದಿರಿ, ಸ್ವಾಮಿ ಇಂತಹದ್ದು ಚರ್ಚೆ ಮಾಡುವುದಕ್ಕೆ ಕಳೆದ ಅಧಿವೇಶನದಲ್ಲಿ ತಮ್ಮ ಅಪ್ಪಣೆಯನ್ನು ಕೇಳಿದೆವು ಸ್ವಲ್ಪ ಟೈಮ್ ಫಿಕ್ಸ ಮಾಡಿಕೊಡಿ ಮಾನ್ಯ ಗೃಹಸಚಿವರ ಜೊತೆಯಲ್ಲಿ ಈ ವಿಚಾರಗಳನ್ನು ಎತ್ತಬೇಕಾಗಿದೆ ನಮ್ಮ ಪಕ್ಷದ ಶಾಸಕರಾದ ಅಪ್ಪಚ್ಚುರವರ ಮೇಲೆ ಕೇಸ್ ಹಾಕಿದ್ದಾರೆ ಇನ್ನೊಬ್ಬರು ಜಯರಾಮಶೆಟ್ಟಿಯವರ ಮೇಲೆ ಕೇಸ್ ಹಾಕಿದ್ದಾರೆ ಕಡೆ ನಡೆಯುತ್ತಿದೆ. ಇದನ್ನು ನಾವು ಕೂಲಂಕಷವಾಗಿ ಪರಿಶೀಲನೆ ಮಾಡಬೇಕೆಂದು ಹೇಳಿದಾಗ, ಆ ಸಬ್ಜೆಕ್ಟ್ ಬಂದಾಗ ತಾವು ಏನು ಹೇಳಿದಿರಿ ಸ್ವಾಮಿ? ಆಮೇಲೆ ತೆಗೆದುಕೊಳ್ಳೋಣವೆಂದು ಹೇಳಿದಿರಿ. ನಾವು ಪ್ರಾರಂಭ ಮಾಡುವುದಕ್ಕೆ ಎದ್ದಾಗ ತಾವು ಆಗ್ಗ ನಿಲ್ಲಿಸಿದಿರಿ. ನಿಮ್ಮ ಮಾತಿಗೆ ಬೆಲೆ ಕೊಟ್ಟೊ ನಿಮ್ಮ ಸ್ಥಾನಕ್ಕೆ ಬೆಲೆ ಕೊಟ್ಟೊ ಸುಮ್ಮನಿದ್ದೊ, ಈಗ ಇಡೀ ರಾಜ್ಯದಲ್ಲಿ ಅದು ನಡೆಯುತ್ತಲೇ ಇದೆಯಲ್ಲ. ಎಲ್ಲಿ ನಾವು ಹಚ್ಚಿಡಬೇಕು? ಹೌಸನಲ್ಲಿ ಬಿಚ್ಚಿಡಲಿಲ್ಲವೆಂದು ಇಟ್ಟುಕೊಳ್ಳಿ ಬಿಚ್ಚಿಡತಕ್ಕ ಸ್ಥಳ ಯಾವುದು? ಇದು ಒಂದು ರಾಷ್ಟ್ರೀಯ ಪಕ್ಷ ಇದು ಕೂಡ ಬದುಕಬೇಕು ಬಾಳಬೇಕು ತನ್ನ ಪಾತ್ರವನ್ನು ವಹಿಸಬೇಕು, ತನ್ನ ಧ್ಯೇಯ ಧೋರಣೆಗಳನ್ನು ಜನಗಳಿಗೆ ಹೇಳಬೇಕು. ನಾವು ಇನ್ನೆಲ್ಲಿ ಹೇಳಬೇಕೆನ್ನವುದನ್ನು ತಾವು ದಯವಿಟ್ಟು ನಮಗೆ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲಲೀಗಲ್ ಆಗಿದ್ದು ಮೊದಲು ಸರಿಪಡಿಸಿಕೊಳ್ಳಿ, ನಿಮ್ಮ ಅಧಿಕಾರಕ್ಕೋಸ್ಕರ ಏನಾದರೂ ಮಾಡಿ.

ಶ್ರೀ ವೈ. ರಾಮಕೃಷ್ಣ : ರಾಜಕೀಯ ದೃಷ್ಟಿಯಿಂದ ಕೂಡ ಇದನ್ನು ನಾವು ನೋಡಬೇಕು. ನಾಳೆದಿವಸ ಒಂದುವೇಳೆ ಅವರು ಉಪವಾಸ ಮಾಡಿ ಸತ್ತರು ಎಂದು ಹೇಳಿದರೆ ಅದಕ್ಕೆ ಯಾರು ಜವಾಬ್ದಾರರು? ಈ ಜವಾಬ್ದಾರಿಯನ್ನು ನಮ್ಮ ಪಕ್ಷ ಹೊರಬೇಕೇನು? ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ, ತಾವು....

ಅಧ್ಯಕ್ಷರು : ಶ್ರೀರಾಮರೆಡ್ಡಿಯವರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಲ್ಲಿ ಇರತಕ್ಕಂಥಾದ್ದು ಎರಡು ಪ್ರಶ್ನೆ. ಒಂದು, ಈ ಉಪವಿಭಾಗಾಧಿಕಾರಿ ಒಬ್ಬ ನ್ಯಾಯಾಧೀಶರಾಗಿ ಮಾಡಿರತಕ್ಕಂಥ ಆಜ್ಞೆಯೆಂದು ಹೇಳಿದರೆ ಅದನ್ನು ತಪ್ಪಿಸಬೇಕಾಗುತ್ತದೆ ಎಂದು, ಹೇಳಿ ತೀರ್ಮಾನ ಮಾಡುವುದಕ್ಕೆ ಖಂಡಿತ ಸಾಧ್ಯವಿಲ್ಲ. ಆದರೆ ಈತನು ಮಾಡಿರತಕ್ಕಿಂಥ ತೀರ್ಪಿನಲ್ಲಿ ಒಂದು ಅಂಶ ಏನಿದೆ, ಆ ಅಂಶವನ್ನು ಯಾರೂ ಒಪ್ಪುವುದಕ್ಕೆ ಸಾಧ್ಯವಿಲ್ಲ. ಆದರೆ ಇದರ ಬಗ್ಗೆ ಆಡಳಿತಾತ್ಮಕವಾದ ಕ್ರಮ ತೆಗೆದುಕೊಂಡು ಇಂತಹ ಅಧಿಕಾರಿಗಳ ಬಗ್ಗೆ ಸರ್ಕಾರ ಎಚ್ಚರಿಕೆ

ವಹಿಸಬೇಕು ಎನ್ನತಕ್ಕಂಥಾದ್ದು ಬಹಳ ಮುಖ್ಯವಾದ ವಿಷಯ. ಆದ್ದರಿಂದ ನಾನು ತಮ್ಮ ಮೂಲಕ ಮನವಿ ಮಾಡುವುದು ಇಷ್ಟೆ. ಈ ಆಜ್ಞೆಯನ್ನು ಈ ಸದನ ಬದಲಾವಣೆ ಮಾಡುವುದಕ್ಕೆ ಖಂಡಿತ ಸಾಧ್ಯವಿಲ್ಲ. ಅವರು ಕಾನೂನು ಪ್ರಕಾರ ಅಪೀಲ್ ಹೋಗಿ ರದ್ದುಪಡಿಸಕೊಳ್ಳಬೇಕು. ಅದೇ ಸಂದರ್ಭದಲ್ಲಿ ಸರ್ಕಾರ ಇಂತಹ ಅಧಿಕಾರಿಗಳ ಬಗ್ಗೆ ಎಚ್ಚರಿಕೆಯಿಂದ ಇದ್ದು ಇಂತಹವರನ್ನು ಎಲ್ಲೆಲ್ಲಿ ಇಡಬೇಕೋ ಅಲ್ಲಿ ಇಡಬೇಕೆಂದು ಪ್ರಯತ್ನ ಮಾಡಬೇಕು. ಇಷ್ಟೇ ನನ್ನ ಅಭಿಪ್ರಾಯ.

ಅಧ್ಯಕ್ಷರು : ಇನ್ನು, ಕೊನೆಯದಾಗಿ ಶ್ರೀವಾಟಾಳ್ ನಾಗರಾಜ್ ಅವರು. ಸಮಯ ಜಾಸ್ತಿ ತೆಗೆದುಕೊಳ್ಳಬೇಡಿ.

ಶ್ರೀ ವಾಟಾಳ್ ನಾಗರಾಜ್ : ಈಗ ಸರ್ಕಾರ ಇಲ್ಲಿಯವರೆಗೆ ಇದನ್ನು ಎಳೆದುಕೊಂಡು ಹೋಗಿರುವುದೇ ಒಂದು ರೀತಿಯಲ್ಲಿ ಪ್ರಚೋದನೆಯಾದ ಹಾಗೆ ಕಾಣುತ್ತದೆ. ಏಕೆಂದರೆ ಇಷ್ಟು ಸೂಕ್ಷ್ಮವಾದ ವಿಚಾರವನ್ನು ನಿನ್ನೆಯೇ ಬಗೆಹರಿಸಬೇಕಾಗಿತ್ತು. ನಾನು ಏನಾದರೂ ಸರ್ಕಾರದ ಮೇಲೆ ಕಟುವಾಗಿ ಮಾತನಾಡುವುದಕ್ಕೆ ಹೋದರೆ, ನಮ್ಮ ಮೇಲೆ ಬೀಳುವುದಕ್ಕೆ ಬರುತ್ತಾರೆ. ನಾವು ಭಯಭೀತಿಯಿಂದ ಇಲ್ಲಿ ಮಾತನಾಡಬೇಕಾಗುತ್ತದೆ. ಒಂದು ರೀತಿಯಾದ..

ಅಧ್ಯಕ್ಷರು : ಇದಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡಿ.

ಶ್ರೀವಾಟಾಳ್ ನಾಗರಾಜ್ : ಇದಕ್ಕೆ ಸಂಬಂಧಪಟ್ಟಹಾಗೆಯೇ ನಾನು ಮಾತನಾಡುವಾಗ ನಾಲ್ಕು ಜನ ಎದ್ದುನಿಂತರೆ ನಮ್ಮ ಪರಿಸ್ಥಿತಿ ಏನು?

ಅಧ್ಯಕ್ಷರು : ಯಾರು ಯಾರಿಗೂ ಹೆದರಿಕೊಂಡು ಮಾತನಾಡಬೇಕಾಗಿಲ್ಲ.

ಡೀವಿಯೇಟ್ ಮಾಡುವುದು ಬೇಡ. ನೀವು ಹೆದರುತ್ತೀರಾ? ಇಡೀ ರಾಜ್ಯವನ್ನು ಹೆದರಿಸುವವರು ನೀವು. ಎಷ್ಟೋ ಸಲ ನಾನೇ ನಿಮಗೆ ಹೆದರುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಇದು ಸತ್ಯಕ್ಕೆ ದೂರವಾದ ಮಾತು.

ಅಧ್ಯಕ್ಷರು : ಪ್ರಮೀಳಾರವರೇ ಹೇಳಲಿ ಹೌದಲ್ಲಮ್ಮ?

ಶ್ರೀ ವಾಟಾಳ್ ನಾಗರಾಜ್ : ನೀವು ಇದನ್ನು ಒಪ್ಪಿಕೊಳ್ಳುತ್ತೀರೋ?

ಶ್ರೀ ಪ್ರಮೀಳಾ ನೇಸರ್ಗಿ : ಸಮಯ, ಸಂದರ್ಭ ಹೇಗೆ ಇರುತ್ತದೆಯೇ ಹಾಗೆ.

ಅಧ್ಯಕ್ಷರು : ಕರೆಕ್ಟ.

ಶ್ರೀ ಎಂ. ಪಿ. ಪ್ರಕಾಶ್ : ಸದನದ ಸಮಯದ ವಿಷಯದ ಬಗ್ಗೆ ಹೇಳುವಾಗ....Everything fears for time but the time fears for the pyramids ಅಂತವಾದ ಇದೆ. But here is a pyramid and you also fears for him.

MR. SPEAKER : (Laughter) I am glad you have come to my rescue.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇದು ಪರಿಸ್ಥಿತಿಯನ್ನು ಉಲ್ಬಣ ಮಾಡಿ ನಾವು ಕಾನೂನು ಪ್ರಕಾರ ಇಲ್ಲಿ ಚರ್ಚೆ ಮಾಡಬೇಕೇ ಅಥವಾ ಮಾಡಬಾರದೇ ಎನ್ನತಕ್ಕಂಥಾದ್ದು ಒಂದು ವಾದ. ಆದರೆ ನಾವು ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ ಅಂತ ಹೇಳಿ, ಮೇಲ್ಮನವಿ ಹೋಗಿ ಅಂತ ಹೇಳಿದರೆ, ಮೇಲ್ಮನವಿಗೆ ಯಾರು ಹೋಗಬೇಕು? ಅದನ್ನು ಸಲ್ಲಿಸಬೇಕಾದವರು ಯಾರು? ಜೈಲಿನಲ್ಲಿ ಉಪವಾಸ ಮಾಡತಕ್ಕಂಥವರು ಮತ್ತು ಜೈಲಿನಿಂದ ಆಸ್ಪತ್ರೆಗೆ ಹೋಗಿರತಕ್ಕಂಥವರು ಅಥವಾ ಅವರ ಪರವಾಗಿ ಇರತಕ್ಕಂಥವರು ಮೇಲ್ಮನವಿಯನ್ನು ಸಲ್ಲಿಸಬೇಕು. ಆಮೇಲೆ ಮನವಿಯನ್ನು ಸಲ್ಲಿಸಿ ಅವರು ಮತ್ತೊಂದು ತೀರ್ಪು ಕೊಡುವವರೆಗೆ ಈ ಸೂಕ್ಷ್ಮವಾದ ವಿಚಾರ ಬೂದಿಯಲ್ಲಿ ಮುಚ್ಚಿದ ಕೆಂಡದಂತಿರತಕ್ಕಂಥಾದ್ದು, ಮತ್ತೆ ಉಲ್ಬಣವಾಗಿ ಇನ್ನೊಂದು ದಿಕ್ಕಿಗೆ ತಲುಪುತ್ತದೆ. ಆದ್ದರಿಂದ ನಾನು ಹೇಳುವುದೇನೆಂದರೆ, ಈಗಾಗಲೇ ಇಷ್ಟು ಚರ್ಚೆಗೆ ಅವಕಾಶ ಆಗಲೇಬಾರದಿತ್ತು. ಇಲ್ಲಿ ಧರಣ ಮಾಡಿ, ಸರ್ಕಾರವನ್ನು ಒತ್ತಾಯಮಾಡಿ, ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದರೆ, ಅಧಿಕಾರಿಗಳ ಮೇಲೆ ನಮಗೇನು ದ್ವೇಷ ವೈಯಕ್ತಿಕವಾಗಿ ಇಲ್ಲ. ಅವರು ಏನೊಂದು ಅಕ್ರಮವಾದಂಥ ಒಂದು ಅನುಚಿತವಾದಂಥ, ಅವಾಸ್ತವಿಕವಾದಂಥ ಆದೇಶವನ್ನು ಹೊರಡಿಸಿದ್ದಾರೆ, ಆ ಆದೇಶ, ಇಡೀ ರಾಜ್ಯದ ಎಲ್ಲ ವರ್ಗದ ಜನ, ಅದು ಕೇವಲ ಬಿ.ಜೆ.ಪಿ.ಯ ಚಳುವಳಿ, ಹಿಂದೂಗಳ ಚಳುವಳಿ, ಮುಸ್ಲೀಮರ ಚಳುವಳಿ ಅಂತ ಅಲ್ಲ. ಇದು ಎಲ್ಲರೂ ತಲೆತಗ್ಗಿಸಬೇಕಾದಂಥ, ಸರ್ಕಾರಕ್ಕೆ ತಲೆನೋವು ಬರತಕ್ಕಂಥ ಆದೇಶ. ಸರ್ಕಾರ ಮೇಲ್ಮನವಿ ಕೊಡುವವರೆಗೂ ನಾವು ಒಪ್ಪುವುದಿಲ್ಲ. ಎನ್ನತಕ್ಕಂಥ ಪೂರ್ವಾಗ್ರಹಪೀಡಿತವಾಗಿ ನಾವೇ ನೋಡಿಬಿಡೋಣ ಎಂದು ಹಠ ಮಾರಿತನ ಮಾಡುತ್ತದೆಯೋ ಏನೋ, ಇದು ನನ್ನ ಅನಿಸಿಕೆ. ಸರ್ಕಾರ ಕೂಡಲೇ ಹಠ ಮಾಡದೆ ಇದನ್ನು ಕೈಬಿಟ್ಟು ವಸ್ತುಸ್ಥಿತಿಯನ್ನು ನೋಡಬೇಕು. ಕಾನೂನು ಒಂದು ಕಡೆ ವಸ್ತುಸ್ಥಿತಿ ಒಂದು ಕಡೆ. ಇದನ್ನೂ ಕೂಡ ನೋಡಲಿ, ಮತ್ತು ಆ ಅಧಿಕಾರಿ ಬಗ್ಗೆಯಾವರೀತಿ ಕ್ರಮ ತೆಗೆದುಕೊಳ್ಳಬೇಕೆಂದು ನೋಡಿ ಅದನ್ನು ತಕ್ಷಣ ತೆಗೆದುಕೊಳ್ಳಬೇಕೆಂದು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತೇನೆ.

+ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಭಾಧ್ಯಕ್ಷರೇ, ನಮ್ಮ ಮಿತ್ರರು ಹೇಳಿರತಕ್ಕಂಥ ವಿಚಾರಗಳನ್ನು ನಾನು ಕೇಳಿದ್ದೇನೆ. ಏನೊಂದು ಪ್ರಕರಣ ಕ್ರಿಮಿನಲ್ ಪ್ರೊಸಿಜರ್ ಕೋಡ್ ನಿಮಯ 110ರಲ್ಲಿ, ಅದರ ಅಡಿಯಲ್ಲಿ ತೆಗೆದುಕೊಂಡಿರತಕ್ಕಂಥ ಪ್ರಕರಣ ಇದು. ಇದರಲ್ಲಿ ಅವನು ಅಸಿಸ್ಟೆಂಟ್ ಕಮೀಷನರ್, ನಮ್ಮ ಕಾರ್ಯಾಂಗ ವ್ಯವಸ್ಥೆಯಲ್ಲಿ ಆಗುತ್ತದೆ. ಕ್ರಿಮಿನಲ್ ಪ್ರೊಸಿಜರ್ ಕೋಡ್‌ನ ಅಸಿಸ್ಟೆಂಟ್ ಕಮೀಷನರ್ ಸಬ್‌ಡಿವಿಷನ್ ಮ್ಯಾಜಿಸ್ಟ್ರೇಟ್ ಆಗುತ್ತಾನೆ, ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟ್ ಆಗುತ್ತಾನೆ. ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟಗೆ ಕೊಟ್ಟಿರತಕ್ಕಂಥ ಅಧಿಕಾರ ಕೂಡ ಇದೆ. ಆದ್ದರಿಂದ ಇವತ್ತು ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ ಕೈಕೆಳಗೆ ಮಾಡತಕ್ಕಂಥ ಅಧಿಕಾರ ಯಾವುದು ಇದೆ, ಅದೆಲ್ಲವೂ ಕೂಡ ಕಾನೂನಿನ ಅಡಿಯಲ್ಲಿ ಅವನಿಗೆ ಇರತಕ್ಕಂಥ ಜ್ಯೂಡಿಶಿಯಲ್ ಪವರ್ಸ್ ಯಾವುದಿದೆ, ಅದರ ಅಡಿಯಲ್ಲಿ ಅವನು ಎಕ್ಸರ್‌ಸೈಸ್ ಮಾಡತಕ್ಕಂಥ

ಅಧಿಕಾರ. ಆದ್ದರಿಂದ ಇವತ್ತು ಅವನು ಮಾಡಿರತಕ್ಕಂಥ ಒಂದು ತೀರ್ಪು ಯಾವುದಿದೆ, ಆ ತೀರ್ಪು ಕಾನೂನಿಗೆ ವಿರುದ್ಧವಾದ ತೀರ್ಪು ಆಗಿರಲಿಕ್ಕೂ ಸಾಕು. Let me tell you honestly now. I think after going through that order I feel that order where in he demands two sureties of respectable muslims should be given as Sureties, ಎಂದು ಹೇಳುತ್ತಾ ಇರತಕ್ಕಂಥಾದ್ದು that order is not in conformity in my opinion not in accordance with any of the provision of the Act. ಆದರೆ ಪ್ರಶ್ನೆ ಇಲ್ಲ ಬರತಕ್ಕಂಥಾದ್ದು ಏನೆಂದರೆ, ಅವರು ಮಾಡಿರತಕ್ಕಂಥ ಆರ್ಡರ್ ಅದು ಆಡಳಿತಾತ್ಮಕವಾಗಿರತಕ್ಕಂಥ ಆರ್ಡರ್ ಆದರೆ ಬಹುಶಃ ಸರ್ಕಾರದ ವತಿಯಿಂದ ಮಂತ್ರಿಗಳು ಕೂಡ ಅದನ್ನು ಸ್ಟೇ ಮಾಡುವುದಕ್ಕೆ ಅಧಿಕಾರ ಇದೆ. ಅಸಿಸ್ಟೆಂಟ್ ಕಮೀಷನರ್, ಡೆಪ್ಯೂಟಿ ಕಮೀಷನರ್ ಮಾಡಿರತಕ್ಕಂಥ ಆಜ್ಞೆ, ಅದು ಅವರು ಆಡಳಿತಾತ್ಮಕ ಅಧಿಕಾರದ ಕೆಳಗೆ ಅಧಿಕಾರ ಇದೆ. ಆದರೆ ಅವರು ಯಾವ ಅಧಿಕಾರವನ್ನು ಚಲಾವಣೆ ಮಾಡಿದ್ದಾರೆ ಎಂದರೆ, ನ್ಯಾಯಾಧೀಶರಾಗಿ ಕುಳಿತು ಚಲಾವಣೆ ಮಾಡಿದ ಈ ಅಧಿಕಾರ ಯಾವುದಿದೆ, ಶ್ರೀಮತಿ ಪ್ರಮೀಳಾ ಅವರು ಒಪ್ಪುತ್ತಾರೆ ಎಂದು ಕಾಣುತ್ತದೆ. ಹೀಗೆ ಚಲಾವಣೆ ಮಾಡಿರತಕ್ಕಂಥ ಅಧಿಕಾರವನ್ನು, ಈ ಒಂದು ಆಜ್ಞೆಯನ್ನು ತಡೆಹಿಡಿಯತಕ್ಕದ್ದು, ರದ್ದು ಮಾಡತಕ್ಕದ್ದು, ಆ ಅಧಿಕಾರ ಮಾನ್ಯ ಮಂತ್ರಿಗಳಾಗಲೀ ಡಿವಿಜನಲ್ ಕಮೀಷನರ್ ಅವರಿಗಾಗಲೀ, ಸೆಕ್ರೆಟರಿಯವರಿಗಾಗಲೀ, ಯಾರಿಗೂ ಇಲ್ಲ. ಆದ್ದರಿಂದ ಇವತ್ತು ಕಾನೂನಿನ ಅಡಿಯಲ್ಲಿ ತೆಗೆದುಕೊಂಡಿರತಕ್ಕಂಥ ಈ ಒಂದು ತೀರ್ಮಾನ ಯಾವುದಿದೆ, ಅದನ್ನು ನಾವು ಇಲ್ಲಿ ಚರ್ಚೆ ಮಾಡುವುದಕ್ಕೆ, ನಾನು ಬಹಳ ಗೌರವದಿಂದ ಹೇಳುತ್ತಿದ್ದೇನೆ, ಅದನ್ನು ಚರ್ಚೆ ಮಾಡತಕ್ಕಂಥ ಅಧಿಕಾರ ನಮಗೆ ಇಲ್ಲ. ಕಾನೂನಿನ ಅಡಿಯಲ್ಲಿ, ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ ಅಡಿಯಲ್ಲಿ ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟ್ ಆಗಿ ಅವರು ಯಾವ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ, ಅದನ್ನು ನಾವು ಇಲ್ಲಿ ಚರ್ಚೆಮಾಡಿ ಅದು ಸರಿ, ಅಥವಾ ತಪ್ಪು ಎಂದು ಹೇಳುವಂಥ ಅಧಿಕಾರ ನಮಗೆ ಇಲ್ಲ. ಇದನ್ನು ನಾನು ನೇರವಾಗಿ, ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇದು ಸರಿಯೋ ಅಥವಾ ತಪ್ಪೋ ಎಂದು ತೀರ್ಮಾನ ಮಾಡಬೇಕಾದರೆ ಅದು ಮಾಡತಕ್ಕಂಥವರು ಡಿಸ್ಟ್ರಿಕ್ಟ್ ಅಂಡ್ ಸೆಶನ್ ಜಡ್ಜ್ who has got the power of revision. ಅದು ಅವರಿಗೆ ಇರತಕ್ಕಂಥ ಅಧಿಕಾರ. ಅವರು ಮಾಡಿರತಕ್ಕಂಥಾದ್ದು ಸರಿಯೇ, ತಪ್ಪೇ ಎಂದು ಹೇಳುವುದ ಅವರಿಗೆ ಬಿಟ್ಟಿರತಕ್ಕಂಥ ಅಧಿಕಾರ. ಆದ್ದರಿಂದ ಕಾನೂನಿನ ಅಡಿಯಲ್ಲಿ ಅವರು ತೆಗೆದುಕೊಂಡಿರತಕ್ಕಂಥ ಕ್ರಮವನ್ನು ಸೆಕ್ಷನ್ 110ರ ಅಡಿಯಲ್ಲಿ ಯಾವುದನ್ನು ಮಾಡಿದ್ದಾರೆ, ಅದು ನ್ಯಾಯವಾಗಿ ಇದೆಯೇ, ಇಲ್ಲವೇ ಎನ್ನತಕ್ಕಂಥಾದ್ದು ನಮ್ಮ ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ನ್ಯಾಯಾಲಯಕ್ಕೆ ಒಳಪಟ್ಟಿದೆ. ಇದು ಒಂದು ಭಾಗವಾದರೆ, ಇಲ್ಲಿ. He has dual functions. One as Asst. Comissioner and another as Executive magistrate or Sub Divisional Magistrate. ಅವನಿಗೆ ಇರತಕ್ಕಂಥ ಜ್ಯೂರಿಸಿಡಿಕ್ಷನ್ ಅದನ್ನು ಕೂಡ ಚರ್ಚೆ ಮಾಡುವುದಕ್ಕೆ ನಮಗೆ ಅಧಿಕಾರ ಇಲ್ಲ. If he doesn't have jurisdiction, the District Court will say he has no jurisdiction and order will be set aside. If he has erroneous Jurisdiction the Sessions Court will say it

is wrong. ಅಥವಾ ಅತನು ಮಾಡಿರತಕ್ಕಂಥ ಆದೇಶ ಏನಿದೆ, ನೀವು ೧೦ ಸಾವಿರ ರೂಪಾಯಿ ಜಾಮೀನು ಕೊಡಬೇಕು ಎನ್ನುವುದು ಒಂದು. ಎರಡನೆಯದು, ಒಂದು ಲಕ್ಷ ರೂಪಾಯಿ ಸಾಲ್ವೆನ್ಸಿ ಸರ್ಟಿಫಿಕೇಟ್ ಒಂದು ತಿಂಗಳಿಗೆ ಇರುವುದನ್ನು ಕೊಡಬೇಕು ಎನ್ನತಕ್ಕಂಥಾದ್ದು, ಮತ್ತು ಮೂರನೆಯದು ಇಬ್ಬರು ಗೌರವಾನ್ವಿತ ಶ್ಯೂರಿಟಿ ಕೊಡಬೇಕು ಎಂದು ಆದೇಶ ಕೊಟ್ಟಿರುವುದು ಕಾನೂನಿನ ವ್ಯಾಪ್ತಿಯೊಳಗೆ, ನ್ಯಾಯಾಲಯ ವ್ಯಾಪ್ತಿಯೊಳಗೆ ಬರುವುದು. ನ್ಯಾಯಾಲಯ ವ್ಯಾಪ್ತಿಯೊಳಗೆ ಬರುವಂಥ ಅಧಿಕಾರವನ್ನು ಪ್ರಶ್ನೆಮಾಡಿ ಅದು ಸರಿಯೇ ತಪ್ಪೇ ಎಂದು ತೀರ್ಮಾನ ಮಾಡತಕ್ಕಂಥ ಅಧಿಕಾರ ಡಿಸ್ಟ್ರಿಕ್ಟ್ ಅಥವಾ ಸೆಶನ್ ಕೋರ್ಟಿಗೆ ಸಂಬಂಧಪಟ್ಟಹಾಗೆ ಇರುತ್ತದೆ ಎನ್ನುವುದು ಇದು ಒಂದು ಮಾತಾದರೆ, ಈ ಒಂದು ಏನು ಅಸಿಸ್ಟೆಂಟ್ ಕಮೀಷನರ್ ಈ ತರಹ ಆರ್ಡರ್ ಮಾಡುವುದರ ಮುಖಾಂತರ ಅಲ್ಲಿ ಒಂದು ಗೊಂದಲವನ್ನು ಸೃಷ್ಟಿ ಮಾಡಿದ್ದಾರೆ ಎನ್ನತಕ್ಕಂಥಾದ್ದು ನಿಮ್ಮ ಒಂದು ಅನಿಸಿಕೆಯಾಗಿದೆ. ಇದನ್ನು ಬಹುಶಃ ಸರ್ಕಾರ ಯಾವರೀತಿ ಗಮನಿಸಬೇಕೆಂದು ಹೇಳತಕ್ಕಂಥ ಒಂದು ವಾದವನ್ನು ತಾವು ಎತ್ತಿದ್ದೀರಿ. ಬಹುಶಃ ಇದನ್ನೆಲ್ಲ ತಾವು ಈ ಸಂಬಂಧವಾಗಿ ಎತ್ತಿದ್ದೀರಿ. ಮಾನ್ಯ ಗೃಹಮಂತ್ರಿಗಳು ಇದೇ ವಿಚಾರವನ್ನು ಹೇಳಿದ್ದಾರೆ. ಶ್ರೀಮಾನ್ ಪ್ರಕಾಶರವರೂ ಹೇಳಿದ್ದಾರೆ, ನಾನೂ ಕೂಡ ಇದನ್ನೇ ಹೇಳುತ್ತಿದ್ದೇನೆ. ಬಹುಶಃ ಇದನ್ನು ಇವತ್ತು ಸರ್ಕಾರ ಗಮನಿಸಿದೆ.

ಆದ್ದರಿಂದ ಆಡಳಿತಾತ್ಮಕವಾಗಿ ಸರ್ಕಾರ, ಈ ಆದೇಶದ ಬಗ್ಗೆ ಅಲ್ಲ. ಈ ಆದೇಶದ ಬಗ್ಗೆ ನೀವು ಅಮಾನತ್ತಿನಲ್ಲಿಡಬೇಕೆಂದು ಹೇಳುತ್ತಿದ್ದೀರಿ. ಇವತ್ತು ನೀವು ಎತ್ತಿರತಕ್ಕ ವಿಚಾರ ಯಾವುದೆಂದರೆ, ಆ ಅಸಿಸ್ಟೆಂಟ್ ಕಮೀಷನರರವರು, ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟ್ ಆಗಿ ಯಾವ ಒಂದು ಆಜ್ಞೆಯನ್ನು ಮಾಡಿದ್ದಾರೆ ಆ ಆಜ್ಞೆಯನ್ನು ನಾನು ಹೇಳುತ್ತಿದ್ದೇನೆ. ಅದು ಸರಿಯೋ ತಪ್ಪೋ, ಅದು ಸೆಕ್ಷನ್ 110ರ ಅಡಿಯಲ್ಲಿ ಮಾಡಿರತಕ್ಕ ಆಜ್ಞೆ. That is an order passed under section 110 of Cr. P.Cr That order cannot be called in question by us. That can be called in question only by the District Sessions judge. Nothing else.ಆದ್ದರಿಂದ, ನಾವು ಈ ವಿಚಾರವನ್ನು ಮಾಡುವಾಗ, ಆಡಳಿತಾತ್ಮಕವಾಗಿ ನೀವು ಎತ್ತಿರತಕ್ಕಂಥ ಕೆಲವು ವಿಚಾರಗಳು ಯಾವುದಿದೆ. ಅಧಿಕಾರಿಗಳನ್ನು ಕೆಲವು ಸಂದರ್ಭದಲ್ಲಿ ಇಲ್ಲಿ ವರ್ಗಾವಣೆ ಮಾಡತಕ್ಕ ಸಂದರ್ಭದಲ್ಲಿ, ಈ ತರಹ ಕೆಲವು ಆಜ್ಞೆಗಳು, ಅದರ ಹಿನ್ನೆಲೆಯಲ್ಲಾಗತಕ್ಕ ಪರಿಣಾಮಗಳ ಬಗ್ಗೆ, ಈಗಾಗಲೇ ಗೃಹಸಚಿವರು ಹೇಳಿದ್ದಾರೆ, ಪ್ರಕಾಶರವರು ಹೇಳಿದ್ದಾರೆ, ನಾನು ಅದನ್ನೇ ಹೇಳಿದೆ ಸರ್ಕಾರದ ಸಹ ಗಮನಿಸಿದೆ. ಇದಕ್ಕೆ ಸಂಬಂಧಪಟ್ಟವಾಗಿ, ಆಡಳಿತಾತ್ಮಕವಾಗಿ, ಈ ಆದೇಶಕ್ಕೆ ಸಂಬಂಧಪಟ್ಟಹಾಗೆ ಅಲ್ಲ. ಈ ಆದೇಶಕ್ಕೆ ಸಂಬಂಧಪಟ್ಟಹಾಗೆ, ನಾವು ಯಾವುದೇ ಕ್ರಮವನ್ನು ಕೈಗೊಳ್ಳುವುದಕ್ಕೆ ಬರುವುದಿಲ್ಲ. ಆದರೆ, ನೀವು ಎತ್ತಿರತಕ್ಕ ವಿಚಾರವನ್ನು ಗಮನದಲ್ಲಿಟ್ಟುಕೊಂಡು, ಸರ್ಕಾರ ಇದರ ಬಗ್ಗೆ ಸ್ಪಂದಿಸುತ್ತದೆ ಎಂಬ ವಿಚಾರವನ್ನು ಇಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ವಿಚಾರವನ್ನು ಸದನದಲ್ಲಿ ಚರ್ಚೆ ಮಾಡಿ, ಅದಕ್ಕೆ ಒಂದು ಉತ್ತರವನ್ನ ಅಥವಾ ಪರಿಹಾರವನ್ನು ಕಂಡುಕೊಳ್ಳತಕ್ಕ ವಸ್ತು ಇದು ಅಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಉಪ ವಿಭಾಗಾಧಿಕಾರಿ ಮಾಡಿರುವಂಥ ಆದೇಶವನ್ನು

ರದ್ದುಪಡಿಸಿ ಅಥವಾ ಬದಲಾವಣೆ ಮಾಡಿ ಎಂದು ನಾವು ಕೇಳುತ್ತಾ ಇಲ್ಲ, ಕೇಳುವುದೂ ಇಲ್ಲ ಕೇಳುವುದಕ್ಕೆ ಬರುವುದೂ ಇಲ್ಲ. ಅಷ್ಟು ಅರಿವು ನನಗಿದೆ. ಈ ಅಧಿಕಾರಿ ಹೋದರೆ, ಮತ್ತೊಬ ಅಧಿಕಾರಿ ಬರುತ್ತಾನೆ, ಆದರೆ, ನಮ್ಮ ಚಿಂತನೆ ಇರುವಂತಾದ್ದು ಈ ಕೆ.ಎ.ಎಸ್. ಅಧಿಕಾರಿ ಮೊನ್ನೆ, ಮೊನ್ನೆ ಅತ್ಯಂತ ಕಿರಿಯ ಅಧಿಕಾರಿ. ನಮ್ಮ ಜಿಲ್ಲಾ ಮಂತ್ರಿಗಳಾದ ಸಿದ್ದರಾಮಯ್ಯನವರಿಗೆ ನಾನು ವಿನಂತಿ ಮಾಡುತ್ತೇನೆ. ತಮಗೆ ಬೇಕಾದರೆ, ತಮ್ಮ ಆಪ್ತ ಕಾರ್ಯದರ್ಶಿಗಳಾಗಿ ಮಾಡಿಕೊಳ್ಳಿ. ನಾವು ಇಲ್ಲಿ ಪ್ರಸ್ತಾಪ ಮಾಡಿದಂಥ ಉದ್ದೇಶ ಒಳ್ಳೆಯದು ಇದೆ. ಇದು ಚರ್ಚೆಯಾದಾಗ, ನೀವು ಶಾಶ್ವತವಾಗಿ ಅಧಿಕಾರದಲ್ಲಿರುತ್ತೇವೆ ಎಂಬ ಯಾವುದೋ ಭ್ರಮೆಯಲ್ಲಿ ಯಾವ ಅಧಿಕಾರಿ ಈ ರೀತಿ ದೇಶದ ಇತಿಹಾಸದಲ್ಲಿ ಹಿಂದೆಂದೂ ಇಲ್ಲದಿರುವಂಥ ಆದೇಶವನ್ನು ಮಾಡಿದಾಗ, ಆ ಅಧಿಕಾರಿ ಆ ರೀತಿ ಮಾಡುವುದಕ್ಕೆ ಮೂಲಪ್ರೇರಣೆ ಯಾವುದು, ಅದು ನಮಗೆ ದುಃಖ ಆ ಆದೇಶ ಅವನು ಮಾಡಿರುವುದಿಲ್ಲ. ಒಂದು ಪ್ರತಿಪಕ್ಷವನ್ನು ಹತ್ತಿಕ್ಕುವುದಕ್ಕೋಸ್ಕರ ಒಬ್ಬ ಅಸಿಸ್ಟೆಂಟ್ ಕಮೀಷನರ್ ಅವರನ್ನು ದುರುಪಯೋಗ ಮಾಡಿಕೊಳ್ಳುವಂಥ ಕೆಲಸ, ಜಿಲ್ಲಾಧಿಕಾರಿಗಳನ್ನು ದುರುಪಯೋಗ ಮಾಡಿಕೊಳ್ಳುವಂಥ ಕೆಲಸ ಎಸ್.ಪಿ., ಡಿ.ಸಿ.ಗಳನ್ನು ದುರುಪಯೋಗ ಮಾಡಿಕೊಳ್ಳುವಂಥ ಕೆಲಸ, ನಿರಂತರವಾಗಿ ಈ ರಾಜ್ಯದಲ್ಲಿ ನಡೆಯುತ್ತಾ ಇದೆ. ಇಂಥ ನೂರಾರು ನಮ್ಮ ಅನುಭವಗಳಲ್ಲಿ ಬಂದಿದೆ. ಇದೇರೀತಿ ಆಡಳಿತ ನಡೆಸುತ್ತೇನೆ, ಅಧಿಕಾರಿಗಳನ್ನು ದುರುಪಯೋಗ.

ಅಧ್ಯಕ್ಷರು : ಭಾರತೀಯ ಅಪರಾಧ ದಂಡ ಸಂಹಿತೆ 110ರ ಅನ್ವಯ, ಅವರು ತಮ್ಮ ಆಜ್ಞೆಯನ್ನು ಹೊರಡಿಸಿದ್ದಾರೆ. ಅದು ಕ್ರಮಬದ್ಧವಾದ ಆಜ್ಞೆಯೋ ಅಥವಾ ಅಸಿಂಧುವಾದ ಆಜ್ಞೆಯೋ ಆದು ಬೇರೆ ಪ್ರಶ್ನೆ.. ಪ್ರತಿಪಕ್ಷಗಳನ್ನು ಹತ್ತಿಕ್ಕುವ ಉದ್ದೇಶದಿಂದ ಈ ಆಜ್ಞೆಯನ್ನು ಮಾಡಿದ್ದಾರೆಂದು ಹೇಳುವುದು ತಮ್ಮ ಅಭಿಪ್ರಾಯವಾಗುತ್ತದೆಯೇ ಹೊರತು, ಆಜ್ಞೆಯ ಉಲ್ಲೇಖದಲ್ಲಿ ಅದನ್ನು ಸಮರ್ಥಿಸತಕ್ಕಂಥ ಅಂಶಗಳು ಏನಾದರೂ ಇದ್ದಲ್ಲಿ ದಯಮಾಡಿ, ಅದನ್ನು ಸಾಬೀತು ಮಾಡಿ. All these things should go into records as my problem is we are handling a very delicate issue.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾವ ಸಂದರ್ಭದಲ್ಲಿ ಬಂಧನ ಮಾಡಿದ್ದು. ಆ ಘಟನೆಯ ಹಿನ್ನೆಲೆಯಲ್ಲಿ, ಒಂದು ಶಾಂತಿಸಮಿತಿಯ ಸಭೆಯನ್ನು ಕರೆದು, ಎಲ್ಲಾಪುರಸಭಾಧ್ಯಕ್ಷರು, ಮತ್ತು ಎಲ್ಲಾ ಪ್ರಮುಖರ ಸಮಕ್ಷಮ ಅವರೇ ಕರೆ ಕೊಟ್ಟು, ಯಾವುದೇ ಕಾರಣ ಇಲ್ಲದೆ, ನೀವು ಕೇಸ್ ಬುಕ್ ಮಾಡಿ..

ಅಧ್ಯಕ್ಷರು : ಆ ಎಲ್ಲಾ ಸಂದರ್ಭಗಳನ್ನು ನಾನು ಅಲ್ಲಗೆಳೆಯುತ್ತಾ ಇಲ್ಲ. ತಾವು ಪ್ರತಿಪಕ್ಷದಲ್ಲಿದ್ದೀರಿ, ಅಲ್ಲಿ ನೀವು ಆ ಕಷ್ಟವನ್ನು ಅನುಭವಿಸಿದ್ದೀರಿ. ಆದರೆ, ನಾನೇನು ಹೇಳುತ್ತೇನೆ, ನನ್ನ ಸಮಸ್ಯೆ ಇಷ್ಟೆ. ಉಪ-ವಿಭಾಗಾಧಿಕಾರಿ ಹೊರಡಿಸಿರತಕ್ಕ ಆಜ್ಞೆಯನ್ನು ಎಲ್ಲಾದರೂ ಇದಕ್ಕೆ ಸಂಬಂಧಿಸಿದಂಥ ಉಲ್ಲೇಖ ಇದೆಯೇ ?

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಮಾತನಾಡುವುದು ನನಗೆ ಆಶ್ಚರ್ಯವಾಗುತ್ತದೆ. ಆ

ಆಜ್ಞೆಯ ಬಗ್ಗೆ ನಾನೇನು ಹೇಳುತ್ತಿದ್ದೇನೆಂದರೆ, ಶಾಂತಿ ಸಮಿತಿ ಸಭೆಯನ್ನು ಕರೆದು ಒಬ್ಬ, ಅಲ್ಲಿಯ ಪ್ರಮುಖರ, ಜಿಲ್ಲಾಮಂತ್ರಿಗಳ ಒಂದು ಚಿತಾವಣೆಯಿಂದ, ಬಿ.ಜೆ.ಪಿ.ಯ ಕಾರ್ಯಕರ್ತರನ್ನು, ಚುನಾಯಿತ ಪ್ರತಿನಿಧಿಗಳನ್ನು ಹತ್ತಿಕ್ಕುವಂಥ ಕಾನೂನುಬಾಹಿರ ಕ್ರಮವನ್ನು ಆ ಅಸಿಸ್ಟೆಂಟ್ ಕಮೀಷನರ್‌ರವರಿಂದ ಈ ಜನತಾದಳ ಸರ್ಕಾರ ಮಾಡಿದೆ; ಇದು ಮುಂದುವರಿಯುತ್ತದೆ. ಸರ್ವಾಧಿಕಾರಿಯಿಂದ ಕೆಲಸವನ್ನು ಮಾಡುತ್ತಿದ್ದಾರೆ. ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ನಾವೇನು ದಂಧೆ ಮಾಡುವುದಕ್ಕೆ ಸಿದ್ಧವಿಲ್ಲ. ನನ್ನ ಉದ್ದೇಶ ಕರ್ನಾಟಕ ರಾಜ್ಯದ ಜನ ಅಲ್ಲಿದ್ದಾರೆ; ನಮ್ಮ ಮಾಲೀಕರು ಅಲ್ಲಿದ್ದಾರೆ. ಯಾವ ರೀತಿ ಅಧಿಕಾರದ ಮದದಿಂದ, ಸರ್ವಾಧಿಕಾರಿಗಳಂತೆ, ಅಧಿಕಾರವನ್ನು ದುರುಪಯೋಗ ಮಾಡಿಕೊಂಡು, ಪ್ರತಿಪಕ್ಷಗಳನ್ನು ಹತ್ತಿಕ್ಕುವಂಥ ಹೇಯ ಕೃತ್ಯ, ಒಬ್ಬ ಜಿಲ್ಲಾಮಂತ್ರಿ, ಒಬ್ಬ ಮಂತ್ರಿಗಳು, ಅಸಿಸ್ಟೆಂಟ್ ಕಮೀಷನರನ್ನು, ಜಿಲ್ಲಾಧಿಕಾರಿಗಳನ್ನು, ಪೋಲೀಸರನ್ನು ದುರುಪಯೋಗ ಮಾಡಿಕೊಳ್ಳುವಂಥ ಅನೇಕ ಘಟನೆಗಳು ನಡೆಯುತ್ತಾ ಇದೆ. ನೀವು ಇದೇ ರೀತಿ ಮುಂದುವರಿಯುವುದಾದರೆ, ಇದೇ ರೀತಿ ಆಡಳಿತ ನಡೆಸುತ್ತೇವೆನ್ನುವುದಾರೆ, ರಾಜ್ಯದ ಜನ ಅದರ ಬಗ್ಗೆ ತೀರ್ಮಾನ ಮಾಡುತ್ತಾರೆ. ಎಲ್ಲಿ ಅಪೀಲು ಮಾಡಬೇಕು, ಎಲ್ಲಿ ನ್ಯಾಯ ತೆಗೆದುಕೊಳ್ಳಬೇಕು ಎನ್ನುವುದು ನಮಗೆ ಗೊತ್ತಿದೆ. ಆದರೆ ಯಾವ ಕಾರಣಕ್ಕೂ ಸಹ ಈ ರೀತಿ ಶಾಸಕರ ಮೇಲೆ , ಬಿ.ಜೆ.ಪಿ. ಕಾರ್ಯಕರ್ತರ ಮೇಲೆ ಕೇಸುಗಳನ್ನು ಹಾಕಿ, ಹತ್ತಿಕ್ಕಬಹುದು ಎಂಬ ಭ್ರಮೆ ನಿಮಗಿದ್ದರೆ, ಅದು ಸಾಧ್ಯವಿಲ್ಲ. ನಿಮ್ಮ ಸರ್ವನಾಶ ಹತ್ತಿರ ಬರುತ್ತಾ ಇದೆ, ಇದನ್ನು ಪ್ರತಿಭಟನೆ ಮಾಡಿ, ನಾವು ಸಭಾತ್ಯಾಗ ಮಾಡುತ್ತೇವೆ. ನಿಮ್ಮ ಒಂದು ನಡವಳಿಕೆ, ನಿಮ್ಮ ಆಡಳಿತ ವೈಖರಿ, ನಾಚಿಕೆಯಿಂದ ತಲೆತಗ್ಗಿಸುವಂಥ ಕೆಲಸ ಮಾಡುತ್ತಾ ಇದ್ದೀರಿ. ಜಿಲ್ಲಾಧಿಕಾರಿಗಳನ್ನು, ತಹಶೀಲ್ದಾರರನ್ನು ದುರುಪಯೋಗ ಮಾಡಿಕೊಂಡು, ಕೈಗೊಂಬೆಗಳನ್ನಾಗಿ ಮಾಡಿಕೊಂಡು...

(ಗೊಂದಲ)

ಶ್ರೀ ಎಂ. ಸಿ. ನಾಣಯ್ಯ : ನೀವು ಮಾತನಾಡಿದ್ದನ್ನು ಕೇಳಿದ್ದೇವೆ, ಹಾಗೆಯೇ ನಾವು ಮಾತನಾಡುವುದನ್ನೂ ನೀವು ಕೇಳಬೇಕಾಗುತ್ತದೆ.

(ಗೊಂದಲ)

(ಬಿ.ಜೆ.ಪಿ. ಸದಸ್ಯರು, ಧಿಕ್ಕಾರ ಕೂಗಿಕೊಂಡು, ಸಭಾತ್ಯಾಗ ಮಾಡಿದರು.)

ಶ್ರೀ ಎಂ. ಸಿ. ನಾಣಯ್ಯ : ನೀವು ಧಿಕ್ಕಾರ ಹಾಕಿ, ಈ ಸಭೆಯ ಘನತೆ ಗೌರವವನ್ನು ನಾಶ ಮಾಡಿ ಹೋಗುತ್ತಿದ್ದೀರಿ.

(ಗೊಂದಲ)

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೇ, ನಾನು ಒಂದನ್ನು ತಮ್ಮಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ. ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀಮಾನ ಯಡಿಯೂರಪ್ಪನವರು, ಯಾವುದೋ ಕಾನೂನಿಗೆ ಒಳಪಟ್ಟಿರತಕ್ಕಂಥ, ನ್ಯಾಯಾಲಯಕ್ಕೆ ಸಂಬಂಧಪಟ್ಟಿರತಕ್ಕ ಆದೇಶವನ್ನು

ಇಲ್ಲಿ ಉಲ್ಲೇಖ ಮಾಡಿ, ಮಾಡಿ, ಕಡೆಗೂ ಎಲ್ಲಿಗೆ ತಂದರು ಎಂದರೆ, ರಾಜಕೀಯವನ್ನು ತಂದು, ಇದೆಲ್ಲದಕ್ಕೂ ಕಾರಣ, ನಮ್ಮ ಆ ಜಿಲ್ಲಾಮಂತ್ರಿಗಳು ಎಂದು ಹೇಳತಕ್ಕಂಥಾದ್ದು, ಅವರ ಪ್ರಚೋದನೆಯಿಂದ ಇದು ನಡೆಯುತ್ತಾ ಇದೆ ಎಂಬ ಮಾತನ್ನು ಆಡಿರತಕ್ಕಂತಾದ್ದು, ಬಹುಶಃ ಇದರ ಉದ್ದೇಶವೇನೆಂದರೆ, ನಾಳೆ ಒಂದೆರಡು ತಿಂಗಳಲ್ಲಿ ಬರುತ್ತದೆಯಲ್ಲ, ಅದಕ್ಕಾಗಿ ರಾಜಕಾರಣ ಮಾಡುವುದುಕ್ಕೋಸ್ಕರ ಈ ಒಂದು ವಿಚಾರವನ್ನು ಎತ್ತಿದ್ದಾರೆಯೇ ಹೊರತು, ಇದರಲ್ಲಿ ಬೇರೆ ಯಾವುದೇ ಸತ್ಯಾಸತ್ಯತೆ ಬಗ್ಗೆ ಮಾಡಬೇಕೆಂಬ ಅರಿವು ಇರಲಿಲ್ಲ. ಆದ್ದರಿಂದ, ನಾನು ತಮ್ಮನ್ನು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ. ವಿರೋಧಪಕ್ಷದ ನಾಯಕರು, ಜಿಲ್ಲಾಮಂತ್ರಿಗಳ ಬಗ್ಗೆ ಆಡಿರತಕ್ಕ ಮಾತುಗಳು ಯಾವುದಿದೆ, ಅವರ ಪ್ರಚೋದನೆಯಿಂದಲೇ ಇದು ನಡೆಯುತ್ತಿದೆ ಎಂಬುದು. ಅಂದರೆ, ಆ ಒಂದು ನ್ಯಾಯಾಲಯದ ಆದೇಶ ಯಾವುದಿತ್ತು, ಆ ನ್ಯಾಯಾಲಯದ ಆದೇಶ ಜಿಲ್ಲಾಮಂತ್ರಿಗಳ ಪ್ರಚೋದನೆ ಮುಖಾಂತರ, ನಡೆಯುತ್ತಿದೆ ಎಂದು ಹೇಳತಕ್ಕಂಥ ಮಟ್ಟಕ್ಕೆ ಅವರು ತಲುಪಿದ್ದಾರೆ. ಆದ್ದರಿಂದ ನಾನು ಹೇಳುತ್ತಿದ್ದೇನೆ. ಈ ರೀತಿ ಆಡಿರತಕ್ಕ ಮಾತನ್ನು ತಾವು ಕಡತದಿಂದ ಹೊರಗೆ ತೆಗೆಯಬೇಕಾಗುತ್ತದೆ. ಎರಡನೆಯದು, ಆ ತರಹ ಮಾತನಾಡತಕ್ಕ ಸಂದರ್ಭದಲ್ಲಿ ಜಿಲ್ಲಾಮಂತ್ರಿಗಳ ಬಗ್ಗೆ ಅವರು ಯಾವುದಾದರೊಂದು ವಿಚಾರವನ್ನು ಎತ್ತಬೇಕಾದರೆ, ಅವರು ನಿಮಗೆ ನೋಟೀಸನ್ನು ಕೊಡಬೇಕಾಗುತ್ತದೆ. ನೋಟೀಸನ್ನು ಕೊಟ್ಟಮೇಲೆ, ಅದನ್ನು ಉಲ್ಲೇಖ ಮಾಡಲಿಕ್ಕೆ ತಮ್ಮ ಅನುಮತಿಯನ್ನು ಕೇಳಬೇಕಾಗುತ್ತದೆ. ಯಾವುದನ್ನೂ ಕೇಳದೇ, ಏಕಾಏಕಿಯಾಗಿ, ಈ ವಿಚಾರವನ್ನು ಎತ್ತುತ್ತಾ ಇರತಕ್ಕಂಥಾದ್ದು, ನಾನು ಅತಿ ಗೌರವದಿಂದ ಹೇಳುತ್ತಿದ್ದೇನೆ, ಇಂಥಾದ್ದಕ್ಕೆ ನಾವು ತೆರೆಯನ್ನು ಎಳೆಯಬೇಕಾಗುತ್ತದೆ. ವಿರೋಧಪಕ್ಷದ ನಾಯಕರು ಅದನ್ನು ಹಿಂದಕ್ಕೂ ಕೂಡ ತೆಗೆದುಕೊಳ್ಳಬೇಕಾಗುತ್ತದೆ. ಅವರು ಹಿಂದಕ್ಕೆ ತೆಗೆದುಕೊಳ್ಳದೇ ಹೋದಂಥ ಪಕ್ಷದಲ್ಲಿ, ಕಡತದಲ್ಲಿ ಹೋಗಿರುವುದನ್ನು ತಾವು ತೆಗೆಯಬೇಕೆಂದು ನಾನು ತಮ್ಮಲ್ಲಿ ಅತ್ಯಂತ ಗೌರವದಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಸಿಸ್ಟೆಂಟ್ ಕಮೀಷನರ್ ಅವರಿಗೆ ಇಲ್ಲದೇ ಇರತಕ್ಕ ಅಧಿಕಾರವನ್ನು ಉಪಯೋಗ ಮಾಡಿಕೊಂಡು, ಇದು ಕೊಟ್ಟಿದ್ದಾರೆಂದು ನನ್ನ ಮನಸ್ಸಿಗೂ ಕೂಡ ಬರುತ್ತಾ ಇದೆ. ಇದು ನಿಮ್ಮ ಮನಸ್ಸಿಗೆ ಬಂದಮೇಲೆ, ಯಾವಾಗ, when you think that he has beyond his jurisdiction ಅವನಿಗೆ ಇಲ್ಲದೇ ಇರತಕ್ಕ ಅಧಿಕಾರವನ್ನು ಚಲಾಯಿಸುವುದಕ್ಕೆ ಪ್ರಯತ್ನ ಮಾಡಿದಾಗ, ಕನಿಷ್ಟ ಪಕ್ಷ, ಆಡಳಿತಾತ್ಮಕವಾದ ಒಂದು ಹುಕುಂ ತಾವು ಕೊಡಬಹುದಲ್ಲ. ಆರ್ಡರ್ ಆದರೂ ಕೊಡಬಹುದಲ್ಲ. ಇದು ಬಿಟ್ಟುಬಿಡಿ. ರಿವ್ಯೂ ಮಾಡುವ ಅಧಿಕಾರ ಇಲ್ಲದೇ ಇರಬಹುದು. ಅವನು ಪಾಸ್ ಮಾಡಿದಂಥ ಆರ್ಡರನ್ನು set aside-ಮಾಡುವಂಥ ಅಧಿಕಾರ ಸರ್ಕಾರಕ್ಕೇ ಇಲ್ಲದೇ ಇರಬಹದು. ಕನಿಷ್ಟ ಪಕ್ಷ ಅಡ್ಮಿನಿಸ್ಟ್ರೇಟಿವ್ ಆಗಿ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಾದರೂ ಗೊತ್ತಿದೆ. ಈ ರೀತಿಯಾಗಿ erroneously decision ಕೊಡುತ್ತಾ ಇದ್ದೀರಿ, ನೀವು ಇಲ್ಲಿರುವುದಕ್ಕೆ ಯೋಗ್ಯ ಇಲ್ಲ. ಹೋಗು, ಎಂದು ಇಷ್ಟಾದರೂ ಮಾಡಬಹುದಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ತಮಗೆ ಏನು ಹೇಳುತ್ತೇನೆಂದರೆ, ಈ ವಿರೋಧ ಪಕ್ಷಗಳನ್ನು ಹತ್ತಿರತಕ್ಕಂಥಾದ್ದು, ಜಿಲ್ಲಾಮಂತ್ರಿ ಯಾರು ಆ ತರಹ ನಡೆದುಕೊಳ್ಳುವುದಕ್ಕಾಗುವುದಿಲ್ಲ. ನಾನು

ಹೇಳುವಾಗ, ಆ ತರಹ ಹತ್ತಿಕ್ಕುತ್ತಾರೆ ಎಂದು ನಮ್ಮ ಭಾವನೆಯಲ್ಲ. ಅವರು ಯಾವ ಭಾವನೆಯಲ್ಲಿ ಹೇಳುತ್ತಾರೋ ಗೊತ್ತಿಲ್ಲ. ವಿರೋಧಪಕ್ಷಗಳನ್ನು ತುಳಿಯತಕ್ಕ ಸನ್ನಾಹ ಇಡೀ ಸರ್ಕಾರಕ್ಕೆ ಇದೆ. ಅದರಲ್ಲೇನೂ ಅನುಮಾನ ಇಲ್ಲ.

ಅಧ್ಯಕ್ಷರು : ಯಾವ ವಿಚಾರ ಬೇಕಾದರೂ, ಎಲ್ಲರೂ ಚರ್ಚೆಮಾಡಿ. ಸಮಯ ಹೋಗುತ್ತದೆ, ಬೇರೆ ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಸಿಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಂಸದೀಯ ಸಚಿವರು ಭಾಷಣ ಮಾಡುವಾಗ, ಎರಡು ಭಾಗ ಮಾಡಿದರು. ಒಂದು ಕಾನೂನು, ಮತ್ತೊಂದು ಅಧಿಕಾರಿಯನ್ನು ಯಾವ ಘಳಿಗೆಯಲ್ಲಿ ಎಲ್ಲಿಗೆ ಬೇಕಾದರೂ ಬದಲಾವಣೆ ಮಾಡತಕ್ಕಂಥ ವ್ಯವಸ್ಥೆ ಇದೆ ಎನ್ನತಕ್ಕಂಥ ಮಾತನ್ನು ಹೇಳಿದರು. ಈ ವ್ಯವಸ್ಥೆ ಏನಿದೆ ಎನ್ನತಕ್ಕ ಮಾತಿನ ಅರ್ಥ, ನನಗೆ ಅರ್ಥವಾಯಿತು. ಆದ್ದರಿಂದ ತಾವು, ಆ ಕ್ರಿಯೆಯನ್ನು ಬಹಳ ಬೇಗ ತಾವು ಮಾಡಿದರೆ, ಅಲ್ಲಿ ಪರಿಸ್ಥಿತಿ ಅನುಕೂಲವಾಗುತ್ತದೆ. ಮತ್ತು ಅಲ್ಲಿ ಶಾಂತ ವಾತಾವರಣ ನಿರ್ಮಾಣವಾಗುವುದಕ್ಕೆ ಸೌಹಾರ್ದರೀತಿಯಿಂದ ಎಲ್ಲಾ ಕೋಮಿನ ಜನ, ಶಾಂತಿಯಿಂದ ಬದುಕುವುದಕ್ಕೆ, ಸರ್ಕಾರ ಪರಿಣಾಮಕಾರಿಯಾಗಿ, ವ್ಯವಸ್ಥಿತವಾಗಿ, ಕೆಲಸವನ್ನು ಮಾಡಬೇಕೆನ್ನುವಂಥಾದ್ದು ನನ್ನ ಪ್ರಾಮಾಣಿಕವಾದಂಥ ಚಿಂತನೆ. ನಾವ್ಯಾರೂ ರಾಜಕೀಯ ಮಾಡಿಕೊಂಡು, ಇಲ್ಲಿ ಜಿಲ್ಲಾಮಂತ್ರಿಗಳು ಮಾಡಿದ್ದಾರೆ, ಎಂದು ಹೇಳುವುದಕ್ಕೆ ನಾನಂತು ತಯಾರಾಗಿಲ್ಲ. ಜಿಲ್ಲಾಮಂತ್ರಿಗಳಿಗೆ ನಾನೇನು ಸರ್ಟಿಫಿಕೇಟ್ ಕೊಡುತ್ತೇನೆ ಎನ್ನುವ ಪ್ರಶ್ನೆಯೂ ಅಲ್ಲ.

1.30 ಪಿ.ಎಂ.

ಬಹುಶಃ ಅವರಿಗೆ ಈ ವಿಚಾರ ಗೊತ್ತಿದೆಯೋ ಇಲ್ಲವೋ? ಗೊತ್ತಿಲ್ಲ ಎಂದು ನನಗೆ ಅನಿಸುತ್ತದೆ. ಈಗ ಅಲ್ಲಿ ನಡೆದಿರತಕ್ಕಂಥಾದ್ದು, ಆದ್ದರಿಂದ ನಾನು ತಮಗೆ ಹೇಳುತ್ತಿದ್ದೇನೆ ಇದು ಇಷ್ಟಕ್ಕೂ ಕಾರಣ ಆ ಒಬ್ಬ ಅಧಿಕಾರಿ. ಆ ಅಧಿಕಾರಿ ಬಗ್ಗೆ ನನಗೇನೂ ವೈಯಕ್ತಿಕವಾಗಿ ದ್ವೇಷ ಇಲ್ಲ. ಆ ಅಧಿಕಾರಿಯ ಆದೇಶ ಏನು ಇದೆ ಅದನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ. ಏಕೆಂದರೆ ನಾನು ಆ ಕ್ಷೇತ್ರದ ಒಬ್ಬ ವ್ಯಕ್ತಿಆಗಿ, ಆ ಅಧಿಕಾರಿ ಇಂತಹ ಪ್ರಚೋದಕಾರಿಯಾದಂತಹ ಒಂದು ಆದೇಶವನ್ನು ಹೊರಡಿಸತಕ್ಕಂಥಾದ್ದು ಸರಿಯಲ್ಲ ಎನ್ನತಕ್ಕಂಥ ಮಾತು. ನಾನು ಆ ಅಧಿಕಾರಿಯ ವೈಯಕ್ತಿಕ ವಿರುದ್ಧವಾಗಿ ಮಾಡತಕ್ಕಂಥಾದ್ದು ಅಲ್ಲ. ಮತ್ತು ನನ್ನ ಸಭಾತ್ಯಾಗ ಬಿ.ಜೆ.ಪಿ. ಗೆ ಬೆಂಬಲ ಕೊಡುವಂಥಾದ್ದು ಕೂಡ ಅಲ್ಲ.

(ಮಾನ್ಯ ಸದಸ್ಯರಾದ ಶ್ರೀವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು.)

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು : ವಾಕೌಟ್ ಮಾಡುವಾಗ ರಭಸದಲ್ಲಿ ಹೊರಟುಹೋಗಬೇಕು ನಿಧಾನವಾಗಿ ಹೋಗಬಾರದು. ಈ ರೀತಿ ಹೋದರೆ ಇದು ವಾಕಿಂಗ್ ಆಗುತ್ತದೆ. ವಾಕ್ ಔಟ್ ಮಾಡಬೇಕು.

+ಶ್ರೀ ಸಿದ್ದರಾಮಯ್ಯ (ಹಣಕಾಸು ಹಾಗೂ ಯೋಜನಾ ಸಚಿವರು) : ಬಿ.ಜೆ.ಪಿ. ಶಾಸಕರು

9521.60

ಮತ್ತು ವಿರೋಧಪಕ್ಷದ ನಾಯಕರು ಶ್ರೀಮಾನ್ ಯಡಿಯೂರಪ್ಪನವರು ನನ್ನ ಗೈರು ಹಾಜರಿಯಲ್ಲಿ ನನ್ನ ಮೇಲೆ ಆರೋಪ ಮಾಡಿರುವುದನ್ನು ಕೇಳಿದೆ. ನಂಜನಗೂಡಿನ ಉಪ ವಿಭಾಗಾಧಿಕಾರಿ ಅವರಿಗೆ ಕಾನೂನು ರೀತ್ಯ ಕೊಟ್ಟಿರತಕ್ಕಂಥ ಅಧಿಕಾರ ಕ್ವಾಸಿ ಜುಡಿಷಿಯಲ್ ಪವರ್. ಇದನ್ನು ಉಪಯೋಗಿಸಿಕೊಂಡು ಅವರು ಮಾಡಿರತಕ್ಕಂಥ ಆಜ್ಞೆ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮೊದಲಲ್ಲಿ ಇಂತಹ ಒಂದು ಆಜ್ಞೆಯನ್ನು ಅದು ಕಾನೂನುರೀತ್ಯ ಇದೆಯೇ ಇಲ್ಲವೇ ಎಂದು ಚರ್ಚೆ ಮಾಡತಕ್ಕಂಥಾದ್ದು ಕೂಡ ಈ ಸದನದಲ್ಲಿ ಸಾಧ್ಯವಿಲ್ಲ. ಜೊತೆಗೆ ಅದನ್ನು ಬದಲಾವಣೆ ಮಾಡತಕ್ಕಂಥಾದ್ದು ಆಗಲಿ ಅಥವಾ ತಿದ್ದುಪಡಿ ಮಾಡತಕ್ಕಂಥಾದ್ದು ಆಗಲಿ ಅಥವಾ ಅದನ್ನು ಹಿಂದಕ್ಕೆ ತೆಗೆದುಕೊಳ್ಳತಕ್ಕಂಥಾದ್ದು ಆಗಲಿ ಅಧಿಕಾರಿಗೆ ಯಾವುದೇ ತರಹದ ಸೂಚನೆಯನ್ನು ಕೊಟ್ಟು ಈ ರೀತಿ ಮಾಡು ಎಂದು ಹೇಳುವುದಕ್ಕೆ ಸರ್ಕಾರಕ್ಕೂ ಅಧಿಕಾರ ಇಲ್ಲ. ಕಾನೂನು ಕೂಡ ಅದರ ಪರವಾಗಿ ಯಾವ ಕಾಯ್ದೆಯಲ್ಲಿಯೂ ಕೂಡ ಇಲ್ಲ ಎಂದು ಹೇಳಿ ನಾನು ಬಹಳ ಸ್ಪಷ್ಟಪಡಿಸುವುದಕ್ಕೆ ನಾನು ಇಚ್ಛೆಪಡುತ್ತೇನೆ. ನಾನು ನಿನ್ನೆಯೇ ಈ ಪ್ರಕರಣವನ್ನು ಇಲ್ಲಿ ಕೇಳಿದ್ದುದು ನನಗೆ ಇದು ಗೊತ್ತೇ ಇರಲಿಲ್ಲ. ನಾನು ನಿನ್ನೆ ಸದನಕ್ಕೂ ಕೂಡ ಬಂದಿರಲಿಲ್ಲ. ಇವತ್ತು ಬಂದಾಗ ಇಲ್ಲಿ ಪ್ರಸ್ತಾಪ ಮಾಡಿದಾಗ ನಾನು ಮಾನ್ಯಗೃಹ ಸಚಿವರ ಜೊತೆಯಲ್ಲಿ ವಿಚಾರ ಮಾಡಿದೆ. ಆದ್ದರಿಂದ ಇದು ನನ್ನ ಜ್ಞಾನಕ್ಕೆ ಬಂದಿರತಕ್ಕಂಥಾದ್ದು ಈಗಲೇ. ನಾವು ಪ್ರಜಾತಂತ್ರದಲ್ಲಿ ಬಹಳಷ್ಟು ನಂಬಿಕೆಯನ್ನು ಇಟ್ಟುಕೊಂಡಿರತಕ್ಕಾಂಥವರು. ನಾನಂತೂ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟುಕೊಂಡಿರುವವನು. ಇವತ್ತಿನವರೆಗೂ ನಾನು ಯಾವುದೇ ಕಾಲದಲ್ಲಿ ಮಂತ್ರಿಯಾಗಿದ್ದಾಗ ಹಿಂದೆ ಜನತಾ ಸರ್ಕಾರ ಅಧಿಕಾರದಲ್ಲಿದ್ದಾಗ ಮಂತ್ರಿಯಾಗಿದ್ದಾಗ ಆಮೇಲೆ ಈಗ ಮಂತ್ರಿಯಾಗಿದ್ದಾಗ ಅಧಿಕಾರಿಗಳನ್ನು ಉಪಯೋಗಿಸಿಕೊಂಡು ವಿರೋಧಪಕ್ಷಗಳನ್ನು ದಮನ ಮಾಡತಕ್ಕಂಥ ಅಥವಾ ವಿರೋಧಪಕ್ಷಗಳನ್ನು ತುಳಿಯತಕ್ಕಂಥ ಅವರ ಶಕ್ತಿಯನ್ನು ಕುಂದಿಸತಕ್ಕಂಥ ನೀಚ ಕೆಲಸವನ್ನು ಎಂದೂ ಕೂಡ ನಾನು ಮಾಡುವುದಿಲ್ಲ? ಅದರ ಅಗತ್ಯ ಕೂಡ ನಮಗೆ ಇಲ್ಲ ಮತ್ತೆ ಇನ್ನು ಮುಂದೆಯೂ ಕೂಡ ಮಾಡುವುದಿಲ್ಲ. ಇದು ಅವರು ಕಲ್ಪಿಸಿಕೊಂಡಿರತಕ್ಕಂಥ ಒಂದು ಕಥೆ ಅಂತ ಕಾಣುತ್ತದೆ. ಎಲ್ಲಾ ಕಡೆ ಸೋತರು ಬಿ.ಜೆ.ಪಿ.ಯವರು. ನಗರಪಾಲಿಕೆ ಮತ್ತು ಪುರಸಭೆಗಳಲ್ಲಿ ಸೋತ ಮೇಲೆ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಯಾರೂ ಇಲ್ಲ. ಯಾರಿಗೆ ಹೇಳುತ್ತೀರಿ? ಅವರು ಹೇಳಿದ್ದು ನೋಡಿದ ಮೇಲೆ ನೀವು ಹೇಳುತ್ತಿರುವುದು ಜಾಸ್ತಿ ಅಂತ ಅನಿಸುತ್ತದೆ.

ಶ್ರೀ ಸಿದ್ದರಾಮಯ್ಯ : ಅವರು ಹೇಳಿದ್ದುದು ಒಂದು ಪದ ಆದರೂ ಕೂಡ ಹೇಳಬೇಕಾಗುತ್ತದೆ ನನಗೆ ಗೊತ್ತಿಲ್ಲದೇ ಇರತಕ್ಕಂಥ ವಿಚಾರದಲ್ಲಿ ಅನಗತ್ಯವಾಗಿ ನನ್ನನ್ನು ಎಳೆದು ಆ ಅಧಿಕಾರಿ ಮೇಲೆ ಪ್ರಭಾವ ಬೀರಿದ್ದಾರೆ, ಪ್ರಭಾವ ಬೀರಿ ಆ ರೀತಿ ಆರ್ಡರ್ಸ್‌ಮಾಡುವಂತೆ ಮಾಡಿದ್ದಾರೆ. ಎನ್ನತಕ್ಕಂಥಾದ್ದು ಸತ್ಯಕ್ಕೆ ದೂರವಾದಂತಹ ವಿಚಾರ. ಅಂತಹ ಕೆಲಸವನ್ನು ಯಾವ ಕಾರಣಕ್ಕೂ ಕೂಡ ಯಾವ ಸಂದರ್ಭದಲ್ಲಿಯೂ ಕೂಡ ಮಾಡುವುದಿಲ್ಲ ಮಾಡಬೇಕಾದಂತಹ ಅಗತ್ಯ ಕೂಡ ಇಲ್ಲ. ಅದು ನಮ್ಮ ಪಕ್ಷದ ನೀತಿ ಕೂಡ ಅಲ್ಲ.

ಶ್ರೀ ಜೆ.ಹೆಚ್. ಪಟೇಲ್ : ನಾವು ಹೇಳಿ ಮಾಡಿಸಿದ್ದರೆ ಮಾನ್ಯ ಅಧ್ಯಕ್ಷರೇ ಅಂತಹ ಕೆಟ್ಟ ಆರ್ಡರ್ಸ ಮಾಡಿಸುತ್ತಿರಲಿಲ್ಲ. ನಾವು ಒಳ್ಳೆಯ ಆರ್ಡರ್ ಅನ್ನು ಮಾಡಿಸುತ್ತಿದ್ದೆವು.

ಶ್ರೀ ಸಿದ್ದರಾಮಯ್ಯ : ಆದ್ದರಿಂದ ಅದು ನಮ್ಮ ಪಕ್ಷದಸಂಸ್ಕೃತಿ ಅಲ್ಲ. ಅವರು ಸೋತಿದ್ದರಿಂದ ಡೆಸಪ್ರರೇಟ್ ಆಗಿ ಅವರು ಇಷ್ಟೆಲ್ಲಾ ಅಪಾದನೆಗಳನ್ನು ಮಾಡುತ್ತಿದ್ದಾರೆ ಆದ್ದರಿಂದ ನನ್ನ ಪಾತ್ರ ಇದರಲ್ಲಿ ಏನೂ ಇಲ್ಲ. ಮತ್ತು ಅಂತಹ ನೀಚ ಕೆಲಸಕ್ಕೆ ನಾನು ಕೈಹಾಕುವುದೂ ಇಲ್ಲ. ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟಪಡಿಸುವುದಕ್ಕೆ ಇಚ್ಛಿಪಡುತ್ತೇನೆ. ಅವರು ಹೇಳಿರತಕ್ಕಂಥಾದ್ದು ಎಲ್ಲಾ ಸತ್ಯಕ್ಕೆ ದೂರವಾದುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ ಮಾನ್ಯ ವಿರೋಧಪಕ್ಷದನಾಯಕರು ಬಿ.ಜೆ.ಪಿ. ಕಾರ್ಯಕರ್ತರನ್ನು ರಾಜಕೀಯವಾಗಿ ತುಳಿಯಲಿಕ್ಕೆ ಎಂದು ಹೇಳಿ ಈ ಕಾರ್ಯಕ್ರಮವನ್ನು ಜಿಲ್ಲಾ ಮಂತ್ರಿಗಳು ಮತ್ತು ಸಂಬಂಧಪಟ್ಟ ಮಂತ್ರಿಗಳು ಅವರಿಗೆ ಚಿತಾವಣೆ ಮಾಡಿ ಅಧಿಕಾರಿಗಳನ್ನು ದುರುಪಯೋಗ ಮಾಡಿಕೊಂಡು ಇದನ್ನು ಮಾಡಿದ್ದಾರೆ ಎನ್ನತಕ್ಕಂಥ ಅಪಾದನೆಯನ್ನು ಮಾಡಿದ್ದಾರೆ. ಆ ಅಪಾದನೆ ಸತ್ಯಕ್ಕೆ ಬಹಳ ದೂರವಾಗಿರತಕ್ಕಂಥಾದ್ದು. ಎರಡು ಜನ ಯಾರು ಮೈಸೂರು ಜೈಲಿನಲ್ಲ ಉಪವಾಸ ಮಾಡುತ್ತಿದ್ದಾರೆ ಅವರು ಉಪವಾಸ ಮಾಡುತ್ತಿದ್ದಾರೆ ಎನ್ನುವಂತಹ ಕಾರಣದಿಂದಾಗಿ ಅವರನ್ನು ಕೆ.ಆರ್.ಆಸ್ಪತ್ರೆಗೆ ಟ್ರೀಟಮೆಂಟಗೋಸ್ಕರ ಕಳುಹಿಸಿದೆ ಒಂದು. ಎರಡನೆಯದು ಇವರ ಬ್ಯಾಕಗ್ರೌಂಡ್ ತೆಗೆದು ನೋಡಿದಾಗ ಇವರ ಮೇಲೆ ಬೇಕಾದಷ್ಟು ಕ್ರಿಮಿನಲ್ ಅಪಾದನೆಗಳು ಇವೆ. ಇದೇ ಸದನದಲ್ಲಿ ಕೆಳಿದ ಸಲ ಬಿ.ಬಿ. ಶಿವಪ್ಪನವರು ಈ ಇಷ್ಯೂವನ್ನು ಇವರ ಬಗ್ಗೆ ರೈಜ್ ಮಾಡಿದ್ದರು. ಇವರ ಮೇಲೆ ಕೆಲವು ಕ್ರಿಮಿನಲ್ ಅಪಾದನೆಗಳು ಇವೆ. ಎರಡನೆಯದಾಗಿ ಅವತ್ತಿನ ಜಿಲ್ಲಾಧಿಕಾರಿಗಳು ಇವರನ್ನು ಕಮ್ಯುನಲ್ ರೈಟ್ಸಗೆ ಇನ್‌ವೆಸ್ಟಿಗೇಟ್ ಮಾಡುತ್ತಾರಂತೆ ಅಂತ ಹೇಳಿಬಿಟ್ಟು ಎಕ್ಸ್‌ಟರ್ನ್ ಮಾಡಿದರು. ಎಕ್ಸ್‌ಟರ್ನ್ ಮಾಡಿರತಕ್ಕಂಥ ಆರ್ಡರನ್ನು ಬಹಳ ದಿನಗಳ ನಂತರ ಹೈಕೋರ್ಟಿನಲ್ಲಿ ಸ್ಟೇ ಆಗಿದೆ. ಇವತ್ತು ತಾವು ಹೇಳುತ್ತೀರಿ ಮೈನಾರಿಟೀಸಗೆ ರಕ್ಷಣೆ ಕೊಡಬೇಕು ಅಂತ ಹೇಳಿ. ಆ ಅಸಿಸ್ಟೆಂಟ್ ಕಮೀಷನರ್ ಇವುಗಳನ್ನು ತಡೆಗಟ್ಟುವ ದೃಷ್ಟಿಯಿಂದ ಆಕಸ್ಮಿಕವಾಗಿ ಒಂದು ತಪ್ಪು ಮಾಡಿರಬಹುದು. ಅದು ಸರಿ ಅಂತ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತು ಚಾಮರಾಜನಗರದಲ್ಲಿ ಇಂತಹ ಎಲಿಮೆಂಟ್ಸ್ ಕಮ್ಯೂನಲ್ ಫೀಲಿಂಗ್ಸ್‌ನ್ನು ಇನ್ವೆಸ್ಟಿಗೇಟ್ ಮಾಡಿ ಇಡೀ ರಾಜ್ಯದಲ್ಲಿ ಇದನ್ನು ಹರಡಬೇಕು ಅಂತ ಹೇಳಿ ಹೊರಟಿರತಕ್ಕಂಥ ಉದಾಹರಣೆಗಳು ಇವೆ. ಹಿಂದೆಯೂ ಸಹ ಇಂತಹ ಕೆಲಸಗಳನ್ನು ಮಾಡಿದ್ದಾರೆ. ಅದಕ್ಕೋಸ್ಕರವಾಗಿ ಈ ಸಂದರ್ಭದಲ್ಲಿ ಅವರು ಯಾವುದೇ ಪಾರ್ಟಿಯವರು ಇರಲಿ ಬಿ.ಜೆ.ಪಿ.ಯವರು ಇರಲಿ ಯಾವುದೇ ಪಕ್ಷದವರು ಇರಲಿ, Government will deal with Iron hands. There is no question of exemption in this matter ರೀ ಕನ್ಸೀಟರ್ ಮಾಡುವಂತಹ ಪ್ರಶ್ನೆ ಬರುವುದಿಲ್ಲ. ಅಸಿಸ್ಟೆಂಟ್ ಕಮೀಷನರ್ ಯಾರು ಇದ್ದಾರೆ ಅವರು ಮಾಡಿರತಕ್ಕಂಥ ಜ್ಯೂಡಿಷಿಯಲ್ ಆರ್ಡರ್ ಬಗ್ಗೆ ಸರ್ಕಾರ ಕಾನೂನುಬದ್ಧವಾಗಿ ನಾವು ಏನು ಮಾಡಬೇಕೋ ಅದನ್ನು ಮಾಡುತ್ತೇವೆ. ಈ ಕ್ರಿಮಿನಲ್ಸ್‌ನ್ನು ಕ್ರಿಮಿನಲ್ ಲಾ ಪ್ರಕಾರವಾಗಿ ನಾವು ಏನು ಮಾಡಬೇಕೋ ಆ ರೀತಿ ಡೀಲ್ ಮಾಡಬೇಕಾಗುತ್ತದೆ ನಾವು ಡೀಲ್ ಮಾಡಿದ್ದೇವೆ.

ಅಧ್ಯಕ್ಷರು : ಸಭೆಯನ್ನು 3-30 ನಿಮಿಷದವರೆಗೂ ಮುಂದೂಡುತ್ತೇನೆ.

(ಸಭೆಯು 1-39 ನಿಮಿಷಕ್ಕೆ ಮುಕ್ತಾಯವಾಗಿ ಮತ್ತೆ 3-30 ಗಂಟೆಗೆ ಸೇರುವುದು.

(ಸಭೆಯು 3-45 ಗಂಟೆಗೆ ಪ್ರಾರಂಭವಾಯಿತು. ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು.)

ಪ್ರಕಟಣೆ

ಉಪಾಧ್ಯಕ್ಷರು : ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕಾರವಾದ ಈ ಕೆಳಕಂಡ ವಿಧೇಯಕಗಳನ್ನು ಕರ್ನಾಟಕ ವಿಧಾನಪರಿಷತ್ತಿನಲ್ಲಿ ದಿನಾಂಕ 1.3.1996ರಂದು ಅನುಮೋದಿಸಲಾಯಿತೆಂದು ತಿಳಿಸುತ್ತಿದ್ದೇನೆ.

1. ಬೆಂಗಳೂರು ನಗರ ಯೋಜನಾ ಪ್ರದೇಶ ವಲಯ ವಿನಿಮಯ ತಿದ್ದುಪಡಿ ವಿಧೇಯಕ,

2. ಕರ್ನಾಟಕ ತೆರಿಗೆ ಕಾನೂನುಗಳ ತಿದ್ದುಪಡಿ ವಿಧೇಯಕ, 1996.

ಈಗ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳೋಣ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಮುಖಾಂತರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

ಉಪಾಧ್ಯಕ್ಷರು : ಮಾನ್ಯ ಸಗೀರ್ ಅಹಮದರವರೇ, ಸಂಬಂಧಪಟ್ಟ ಮಂತ್ರಿಗಳು ಇಲ್ಲ, ಆದುದರಿಂದ ಮೊದಲು ನಿಯಮ 351 ತೆಗೆದುಕೊಂಡು ನಂತರ ನಿಮ್ಮ ವಿಚಾರವನ್ನು ತೆಗೆದುಕೊಳ್ಳೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇಲ್ಲ. ಈ ರೀತಿಯಾಗಿ ಹಲವಾರು ಪ್ರಶ್ನೆಗಳು ಬಂದಮೇಲೆ ನನಗೆ ಮತ್ತೇ ತಾವು ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು : ನಿಯಮ 351 ಆಗ ತಕ್ಷಣ ನಿಮ್ಮ ವಿಷಯವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿಧಾನ ಸಭಾ ಸದಸ್ಯರಾದ ಸಗೀರ್ ಅಹಮದರವರ ನಿಯಮ 72ರ ಮೇರೆಗೆ ಗಮನ ಸೆಳೆಯುವ ಸೂಚನೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಹೇಳಿಕೆ ಈ ರೀತಿ ಇದೆ. 'ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿಯ ವತಿಯಿಂದ ದೇವಗಾನ ಗ್ರಾಮ ಪಂಚಾಯಿತಿಯಲ್ಲಿ ಧ್ವಜ ಹಾರಿಸುವ ಬಗ್ಗೆ ಯಾವುದೇ ಕಡಿವಾಣ ಆದೇಶ ಹೊರಡಿಸಿರುವುದಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಗಮನವನ್ನು ಸೆಳೆದಿಲ್ಲ.

ಶ್ರೀ ಡಿ. ಮಂಜುನಾಥ್ : ಗಮನ ಸೆಳೆದಿದ್ದಾರೆ.

ಉಪಾಧ್ಯಕ್ಷರು : ಮೊದಲು ಸಂಬಂಧಪಟ್ಟ ಮಂತ್ರಿಗಳ ಗಮನಸೆಳೆದು ನಂತರ ಮಾತನಾಡಬಹುದು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೇ, ಇದು ಬಹಳ ಗಂಭೀರವಾದಂತಹ ವಿಚಾರವಾಗಿದೆ.

ಉಪಾಧ್ಯಕ್ಷರು : ಸಗೀರ್ ಅಹಮದರವರೇ, ನೀವು ಮಂತ್ರಿಯಾಗಿ ಕೆಲಸ ಮಾಡಿದ್ದೀರಿ. ಮೊದಲು ನೀವು ಗಮನ ಸೆಳೆಯಿರಿ, ಮಂತ್ರಿಯವರು ಸ್ಟೇಟಮೆಂಟ್ ಮಾಡಿದಮೇಲೆ ನೀವು ಕೇಳಿ. ತಾವು ಈಗ ಸಂಬಂಧಪಟ್ಟ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ ಎಂದು ಹೇಳಿ.

ಗಮನ ಸೆಳೆಯುವ ಸೂಚನೆ

(ಅ) ದೇವದಾನ ಗ್ರಾಮ ಪಂಚಾಯತಿಯಲ್ಲಿ ಧ್ವಜ ಹಾರಿಸುವ ಬಗ್ಗೆ.

ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಉಪಾಧ್ಯಕ್ಷರೇ, ನಾನು ತಮ್ಮ ಮುಖಾಂತರ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವಂತಹ ಒಂದು ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಈ ರಾಷ್ಟ್ರದ ಧ್ವಜವನ್ನು ಹಾರಿಸುವುದಕ್ಕೆ ಸರ್ಕಾರದ ವತಿಯಿಂದ ಜಿಲ್ಲಾಪಂಚಾಯತ್ ವತಿಯಿಂದ ಕಡಿವಾಣ ಹಾಕಿರುವಂಥಾದ್ದರ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಡಿ. ಮಂಜುನಾಥ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೇ, ತಮ್ಮ ಅನುಮತಿಯನ್ನು ಕೋರಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿಯ ವತಿಯಿಂದ ದೇವದಾನ ಗ್ರಾಮ ಪಂಚಾಯಿತಿಯಲ್ಲಿ ಧ್ವಜ ಹಾರಿಸುವ ಬಗ್ಗೆ ಯಾವುದೇ ಕಡಿವಾಣ ಆದೇಶ ಹೊರಡಿಸಿರುವುದಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೇ, ಸರ್ಕಾರ ಹೇಳಿರುವಂತಹ ವಿಚಾರ ಸತ್ಯಕ್ಕೆ ದೂರವಾದುದು. ಇದಕ್ಕೆ ಆಧಾರವನ್ನು ಇಟ್ಟುಕೊಂಡು ನಾನು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ನಾನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವುದೇನೆಂದರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವಂತಹ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಶಾಲಾ ಶೈಕಣಿಕ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸುವುದಕ್ಕಾಗಿ ಸರ್ಕಾರ ದಿನಾಂಕ 12.2.1994ರಲ್ಲಿ ಒಂದು ಆದೇಶವನ್ನು ಹೊರಡಿಸಿದೆ. ಆನಂತರ 13.7.1995ರಂದು ಮತ್ತೊಂದು ಆದೇಶ ಹೊರಡಿಸಿದೆ. ಮುಖ್ಯ ನಿರ್ವಾಹಕ ಅಧಿಕಾರಿಗಳು, ಉಪನಿರ್ದೇಶಕರು ದಿನಾಂಕ 13.12.1995 ಸಾರ್ವಜನಿಕ ಶಿಕ್ಷಣ ಇಲಾಖೆಯವರಿಗೆ ಒಂದು ಪತ್ರ ಬರೆಯುತ್ತಾರೆ. ಯಾವ್ಯಾವ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಗ್ರಾಮ ಪಂಚಾಯಿತಿ